ಶ್ರೀ ಬಿ.ಎಸ್. ಯಡಿಯೂರಪ್ಪ : ನಾವು ಮಾತನಾಡಿದ್ದಿಕ್ಕೆ ಒಂದಕ್ಕೂ ಉತ್ತರ ಕೊಡುವುದಿಲ್ಲವೇ ಸ್ವಾಮಿ. 22 ಪರ್ಸೆಂಟ್ ತೆರಿಗೆ ಆಗುತ್ತದೆ ಸ್ವಾಮಿ. ಆ ತೆರಿಗೆ ಕಡಿಮೆ ಮಾಡುತ್ತೀರಾ? ಇವತ್ತು ನೀವು ಈ ಬೆಲೆಗಳನ್ನು ಇಳಿಸುವುದಕ್ಕೆ ಬೆಂಬಲ ಕೊಡುವುದಿಲ್ಲ. ಅದಕ್ಕೆ ನಾವು ಇದನ್ನು ಪ್ರತಿಭಟನೆ ಮಾಡಿ ವಾಕ್ ಔಟ್ ಮಾಡುತ್ತಿದ್ದೇವೆ.

(ಬಿ.ಜೆ.ಪಿ. ಸದಸ್ಯರು ವಾಕ್ ಔಟ್ ಮಾಡಿದರು)

ಶ್ರೀ ಆರ್.ವಿ. ದೇಶಪಾಂಡೆ : ತಾವು ತೆರಿಗೆ ಇಳಿಸಲು ಬೆಂಬಲ ಕೊಡದೇ ಇರುವುದನ್ನು ವಿರೋಧಿಸಿ ವಾಕ್ ಔಟ್ ಮಾಡುತ್ತೇವೆ.

(ಈ ಹಂತದಲ್ಲಿ ಜನತಾ ದಳದ ಸದಸ್ಯರು ಸಭಾತ್ಯಾಗ ಮಾಡಿದರು)

ಉಪಾಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು ಸಮರ್ಥವಾಗಿ ಉತ್ತರ ಕೊಟ್ಟಿರುವುದರಿಂದ ಇಲ್ಲಿಗೆ ಈ ವಿಷಯ ಮುಕ್ತಾಯವಾಯಿತು. ಈಗ ಸದನವನ್ನು 3-00 ಗಂಟೆಯವರೆಗೆ ಮುಂದೂಡುತ್ತೇನೆ.

(ಸದನವು 2-08ನಿಮಿಷಕ್ಕೆ ಮುಂದೂಡಿ ಮತ್ತೆ 3ಘಂಟೆಗೆ ಸೇರಲು ತೀರ್ಮಾನಿಸಿತು)

(ಸದನವು ಮಧ್ಯಾಹ್ನ 3 ಗಂಟೆ 30 ನಿಮಿಷಕ್ಕೆ ಪುನರಾರಂಭಗೊಂಡಿತು)

(ಉಪಾಧ್ಯಕ್ಷರು ಶ್ರೀ ಅಂಜನಾಮೂರ್ತಿಯವರು ಅಧ್ಯಕ್ಷ ಪೀಠವನ್ನಲಂಕರಿಸಿದ್ದರು)

ಕೋಲಾರ ತಾಲ್ಲೂಕಿನ ಹರಟಿ ಗ್ರಾಮದಲ್ಲಿ ದಲಿತನ ಮೇಲೆ ನಡೆದಿರುವ ಹಲ್ಲೆ ಬಗ್ಗೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಉಪಾಧ್ಯಕ್ಷರೇ, ಈ ಶೂನ್ಯ ವೇಳೆಯಲ್ಲಿ ಮಹತ್ತರವಾದ ಒಂದು ವಿಷಯವನ್ನು ಪ್ರಸ್ತಾಪಮಾಡಬೇಕೆಂದು ನಾನು, ಮಾನ್ಯ ಭೈರೇಗೌಡರು, ನಾರಾಯಣಸ್ವಾಮಿಯವರು ಅಧ್ಯಕ್ಷರಿಗೆ ಪತ್ರ ಬರೆದಿದ್ದೇವೆ. ಇದೇ ಫೆಬ್ರವರಿ 27ನೇ ತಾರೀಖು ಕೋಲಾರ ತಾಲ್ಲೂಕಿನಲ್ಲಿ ಒಬ್ಬ ದಲಿತ ಕನ್ನಪ್ಪ ಎನ್ನುವವನ ಮೇಲೆ ಅಮಾನುಷ ಬರ್ಬರ ಹೇಯವಾದ ಕೃತ್ಯ ನಡೆದಿದೆ ಅಧ್ಯಕ್ಷರೇ, ನಮ್ಮ ಸಮಾಜದಲ್ಲಿ ಈ ಕೃತ್ಯಗಳು ಬಹಳ ಹೇಯವಾಗಿರುವಂಥವು. ನಾವೆಲ್ಲರೂ ತಲೆತಗ್ಗಿಸತಕ್ಕಂಥದ್ದು, ಪ್ರಜಾತಂತ್ರದ ಪದ್ಧತಿಗೇ ಒಂದು ಹಾಳುಮಾಡುವಂಥದು. ನಮ್ಮ ಕಾಂಗ್ರೆಸ್ ನಾಯಕರುಗಳು ಇದಕ್ಕೆ ಉತ್ತರವನ್ನು ಕೊಡಬೇಕಾಗುತ್ತದೆ. ನಮ್ಮ ಮಂತ್ರಿಗಳು ನನಗನ್ನಿಸುತ್ತದೆ ಒಂದು ರೀತಿಯಲ್ಲಿ ಬಹಳ ಅಸಡ್ಡೆಯಿಂದ ನೋಡುತ್ತಿದ್ದಾರೆ. ಮತ್ತು ಈ ಪ್ರಕರಣವನ್ನು ಮುಚ್ಚಿ ಹಾಕಲಿಕ್ಕೂ ಸಹಿತ ಪ್ರಯತ್ನ ಮಾಡುತ್ತಿದ್ದಾರೆ. ನಿಮ್ಮ ಬ್ಲಾಕ್ ಕಾಂಗ್ರೆಸಿನ ಅಧ್ಯಕ್ಷರು ಇದರಲ್ಲಿ ಇನ್ವಾಲ್ವ್ ಆಗಿದ್ದಾರೆ ಎಂದು ನೀವೇನಾದರೂ ಇದನ್ನು ಮಾಡ್ತೀರ ಅನ್ನುವುದಾದಲ್ಲಿ ನಿಜವಾಗೂ ಇದು ನಿಮಗೆ ನಿಮ್ಮ ಪಕ್ಷಕ್ಕೆ ಗೌರವವನ್ನು ತರತಕ್ಕಂಥದಲ್ಲ. ಅಧ್ಯಕ್ಷರೇ, ನಿಮಗೆ ಗೊತ್ತಿರುವ ಹಾಗೆ ಕಾಂಗ್ರೆಸ್ ಪಕ್ಷದ ಇತಿಹಾಸ ಕರ್ನಾಟಕದಲ್ಲಿ 1969ರ ನಂತರ ಈ ವರ್ಗದ ಜನಗಳಿಂದ ಬಂದಿರತಕ್ಕಂಥದ್ದು. ದಲಿತರಿಂದ ಹಿಂದುಳಿದ ವರ್ಗದಿಂದ ಹರಿಜನ ಗಿರಿಜನರ ಆಧಾರದ ಮೇಲೆ ಕರ್ನಾಟಕದಲ್ಲಿ ನೀವು ಸರ್ಕಾರ ನಡೆಸಿರುವಂಥದು. ಅವತ್ತೇನು ಕನ್ನಪ್ಪನ ಮೇಲೆ ನಡೆದಿದೆ ಕೃತ್ಯ ಇದರ ಬಗ್ಗೆ ಕೊನೇಪಕ್ಷ ಒಬ್ಬ ಮಂತ್ರಿಗಳು ಆ ಸ್ಥಳಕ್ಕೆ ಹೋಗಿ ಆ ಮುಖಂಡನನ್ನು ನೋಡುವಂತಹ ಸೌಜನ್ಯವನನ್ನೂ ನಿಮ್ಮ ಸರ್ಕಾರದವರು ತೋರಿಸಲಿಲ್ಲ ಎಂದರೆ ಇದರ ಬಗ್ಗೆ ನಾವೇನು ಹೇಳುವುದು, ದಯವಿಟ್ಟು ಹೇಳಿ. ವಿಧಾನಪರಿಷತ್ತಿನಲ್ಲಿ ಮಾನ್ಯ ನಾಗೇಗೌಡರೇ ಎಷ್ಟೊಂದು ದೊಡ್ಡ ಭಾಷಣ ಮಾಡಿದ್ದೀರಿ, ಶಿವಮೊಗ್ಗದಲ್ಲಿ ಒಂದು ಘಟನೆ ಇದೇ ತರಹ ನಡೆಯಿತು ಎಂದು ಹೇಳಿಬಿಟ್ಟು ನಾವು ಅಧಿಕಾರದಲ್ಲಿದ್ದಾಗ ನಾವೆಲ್ಲಾ ದಲಿತರ ವಿರೋಧಿಗಳು, ಹರಿಜನ ಗಿರಿಜನರನ್ನು ನೀವು ಹಾಳುಮಾಡಿದ್ದೀರಿ ಎಂದು ಹೇಳಿ ಸುಟ್ಟು ಹಾಕಿದ್ದೀರಿ ಎಂದು ಹೇಳಿ

ಭಾಷಣ ಮಾಡಿದಿರಿ ನೀವು. ಬಿಜಾಪುರದಲ್ಲಿ ಇದೇ ತರಹದ ಪ್ರಕರಣ ನಡೆಯಿತು ಎಂದು ಹೇಳಿ ಸುಳ್ಳು ಅಪಾದನೆ ಮಾಡಿದಿರಿ, ಬೆಳಗಾವಿ ಜಿಲ್ಲೆಯಲ್ಲಿ ನಡೆಯಿತು ಎಂದು ಹೇಳಿದಿರಿ, ಆಗ ನಮ್ಮ ಜಾಲಪ್ಪನವರು ಗೃಹಇಲಾಖೆ ಮಂತ್ರಿಗಳಾಗಿದ್ದರು. ಆಗ ನಾನೂ ಜಾಲಪ್ಪನವರು ಹೆಲಿಕಾಪ್ಟರಿನಲ್ಲಿ ಶಿವಮೊಗ್ಗಕ್ಕೆ ಹೋಗಿಬಂದೆವು. ಆ ಪ್ರಕರಣ ನಡೆದಿರಲಿಲ್ಲ. ಅದರ ಬಗ್ಗೆ ಬಹಳ ದೊಡ್ಡದಾಗಿದೇ ಸದನದಲ್ಲಿ ಹಾಗೂ ತಾವು ಸದಸ್ಯರಾಗಿರುವ ವಿಧಾನಪರಿಷತ್ತಿನಲ್ಲಿ ಬಹಳ ದೊಡ್ಡದಾಗಿ ಚರ್ಚೆಯಾಯಿತು. ಇವತ್ತಿನ ದಿವಸ ಸೌಜನ್ಯಕ್ಕಾದರೂ ಇನ್ನೇನು ಬೇಡ ಈ ಕೋಲಾರದ ಹರಟಿ ಗ್ರಾಮಕ್ಕೆ ನಿಮ್ಮ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಲೀ ನೀವಾಗಲೀ ಇನ್ನೂ ಹೋಗಿಬಂದಿಲ್ಲ ಅಂದರೆ ಇದಕ್ಕೇನು ಹೇಳಬೇಕು ನಾವು? ಮಾನ್ಯ ಅಧ್ಯಕ್ಷರೇ, ನಾನು ಹೇಳುತ್ತೇನೆ, ನಿಮ್ಮ ಪಕ್ಷದ ಅಧ್ಯಕ್ಷರು ಮಾದಲಿಗೇ ಮಾಡಬೇಕಾಗಿದ್ದ ಕೆಲಸ ಎಂದರೆ ಆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷನನ್ನು ಅಮಾನತ್ತಿನಲ್ಲಿಡಬೇಕಾಗಿತ್ತು.

ಶ್ರೀ ಟಿ.ಎಂ. ಮಂಜುನಾಥ್ : ಮಾನ್ಯ ಅಧ್ಯಕ್ಷರೇ, ಈ ಸಭೆಯ ಸದಸ್ಯರಲ್ಲದವರ ಬಗ್ಗೆ ತಾವು ಮಾತನಾಡತಕ್ಕಂಥದ್ದು ಅಷ್ಟು ಸರಿಯಲ್ಲ. ನಾನು ಯಾರನ್ನೂ ಡಿಫೆಂಡ್ ಮಾಡುವುದಿಲ್ಲ. ಈಗ ತಾವು ಹಿಂದೆ ಹಾಗೆ ಮಾಡಿದರು ಹೀಗೆ ಮಾಡಿದರು ಎಂದು ಪ್ರಸ್ತಾವನೆ ಮಾಡುತ್ತಿದ್ದೀರಿ. ಈಗ ನಮ್ಮ ಮಂತ್ರಿಗಳು ಹೋಗಿದ್ದಾರೋ ಇಲ್ಲವೋ ಗೊತ್ತಿಲ್ಲ. ಅವರು ಬಂದಾಗ ತಾವು ಮತ್ತೆ ಕೇಳಿ. ಇಲ್ಲಿ ನೀವು ಮಾತಾಡಬಾರದು ಎಂಬುದು ನನ್ನ ಉದ್ದೇಶವಲ್ಲ. ಅವರು ಬಂದಾಗ ಹೇಳಿ ಎಂಬುದಕ್ಕೇ ನನ್ನ ಮಾತು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಈಗ ಈ ಕನ್ನಪ್ಪ ಮೂರು ದಿನಗಳ ನಂತರ ಒಂದು ಹೇಳಿಕೆಯನ್ನು ಕೊಟ್ಟಿದ್ದಾನೆ. ಇದನ್ನು ಅಲ್ಲಿರುವ ಸ್ಥಳೀಯ ಪೋಲಿಸರ ಮೂಲಕ ಮುಚ್ಚಿಹಾಕಲಿಕ್ಕೆ ಕೆಲವು ಆಳುವ ಪಕ್ಷದ ಮುಖಂಡರು ಪ್ರಯತ್ನ ಮಾಡುತ್ತಿದ್ದಾರೆ ಎಂಬ ಮಾತನ್ನೂ ಹೇಳಿದ್ದಾರೆ. ಅವನು ತಮಟೆ ಹಿಡಿದು ಹೊಡೆಯಲಿಲ್ಲ ಎಂಬ ಒಂದೇ ಕಾರಣಕ್ಕೆ ಇವರು ಹೇಳಿದ ದಿನದಲ್ಲಿ ಅವನಿಗೆ ಚಿತ್ರಹಿಂಸೆ ಮಾಡಿ ಮನೆಗೆ ಕರೆದುಕೊಂಡು ಹೋಗಿ ಕಟ್ಟಿಹಾಕಿ ಹೊಡೆದಿದ್ದಾರೆ. ಈಗ ಪ್ರಶ್ನೆ ಇರುವಂಥದು ಏನು? ಮಲವನ್ನು ಅವನು ತಿಂದನೋ ಬಿಟ್ಟನೋ ಅನ್ನುವಂಥದು ಒಂದೇ. ನನಗೆ ಗೊತ್ತಿದೆ. ನಮ್ಮ ಪಕ್ಷದ ವತಿಯಿಂದ ಕೆಲವು ಕಾರ್ಯಕರ್ತರನ್ನು ಮುಖಂಡರನ್ನು ಅಲ್ಲಿಗೆ ಕಳುಸಿ ಹಿಡಿದ್ದೆವು. ಅಲ್ಲಿ ಎರಡೂ ಹಳ್ಳಿಗಳಲ್ಲಿ ಕನ್ನಪ್ಪ ಊರಿನಲ್ಲಿ ಮತ್ತು ಆ ಹರಟಿ ಗ್ರಾಮದಲ್ಲಿ ಒಂದು ರೀತಿಯ ಭಯ ಉಂಟು ಮಾಡುವಂತಹ ಸ್ಥಿತಿಯನ್ನು ಇವರು ಕೃತಕವಾಗಿ ನಿರ್ಮಾಣ ಮಾಡಿಸಿದ್ದಾರೆ. ಇದರಲ್ಲಿ ನಾನು ರಾಜಕೀಯವನ್ನು ಬೆರೆಸುವುದಕ್ಕೆ ಹೋಗುವುದಿಲ್ಲ.

ಕಾರಣ ತಮಗೆ ಗೊತ್ತಿರುವ ಹಾಗೆ ನಮ್ಮ ಸಮಾಜದಲ್ಲಿ ಮೊದಲಿನಿಂದಲೂ ದಲಿತರ ಮೇಲೆ ದೌರ್ಜನ್ಯ ನಡೆದುಕೊಂಡು ಬಂದಿದೆ. ಆದರೆ ನಾನೇನು ಮಾನ್ಯ ಮುಖ್ಯಮಂತ್ರಿಗಳಿಂದ ನಿರೀಕ್ಷೆ ಮಾಡಿದ್ದೆ ಎಂದರೆ ಮುಖ್ಯಮಂತ್ರಿಗಳು ತಮ್ಮ ಸಚಿವ ಸಂಪುಟದ ಒಬ್ಬ ಜವಾಬ್ದಾರಿ ಸಚಿವರನ್ನು ಅಲ್ಲಿಗೆ ಕಳುಹಿಸುತ್ತಾರೆ ಎಂದು ಈಗಾಗಲೇ ಕಳುಹಿಸಬೇಕಾಗಿತ್ತು. ಅದಕ್ಕೆ ಬದಲಾಗಿ ಏನಾಗಿದೆ ಆ ಪ್ರಕರಣವನ್ನು ಮುಚ್ಚಿಹಾಕಲಿಕ್ಕೆ ಪ್ರಯತ್ನ ನಡೆಯುತ್ತಿದೆ. ಇದು ನಡೆಯಲೇ ಇಲ್ಲ. ಒಬ್ಬ ಅಂಗನವಾಡಿ ಕಾರ್ಯಕರ್ತೆ ಬಗ್ಗೆ ಕೊಪ್ಪಳದಲ್ಲಿ ಸದನ ಸಮಿತಿಯನ್ನು ರಚನೆ ಮಾಡಿದಿರಿ. ಸದನ ಸಮಿತಿ ತೀರ್ಮಾನ ಮಾಡಿತು ಅದು ನಡೆಯಲೇ ಇಲ್ಲ ಎಂದು ಹೇಳಿ ಆ ತರಹದ್ದೇ ಇದೂ ಒಂದು ಪ್ರಕರಣ ಎಂದು ಹೇಳುತ್ತಿದ್ದಾರೆ. ಆದರೆ ನನಗೆ ಗೊತ್ತಿದೆ ಉಪಾಧ್ಯಕ್ಷರೇ, ಇದು ನಡೆದಿರುವ ಸಂಗತಿ. ಇದರ ಬಗ್ಗೆ ಸತ್ಯಶೋಧನೆ ಆಗಲೇಬೇಕಾಗುತ್ತದೆ. ಇದು ನಾವೆಲ್ಲರೂ ತಲೆತಗ್ಗಿಸತಕ್ಕಂಥ ವಿಚಾರ. ಕಾಂಗ್ರೆಸ್ ಪಕ್ಷ

ಅಥವಾ ಸರ್ಕಾರ ತಲೆತಗ್ಗಿಸತಕ್ಕಂಥದಲ್ಲ. ಮಾನವೀಯತೆ ಇರುವ ನಾವೆಲ್ಲರೂ ಇದರ ಬಗ್ಗೆ ತಲೆತಗ್ಗಿಸತಕ್ಕಂಥದು.

ಏಕೆ ಅವನು ತಮಟೆ ಹೊಡೆಯಬೇಕು? ತಮಗೆ ಹೊಡೆಯಲಿಲ್ಲ ಎನ್ನುವ ಕಾರಣಕ್ಕೆ ಅವನನ್ನು ನೀವು ಕಟ್ಟಿಹಾಕ್ತೀರಾ? ಕೆಲವರು ಅಧಿಕಾರಿಗಳು ನಾನು ಕೇಳಿದಾಗ ಏನು ಹೇಳ್ತಾರೆ ಅಂದರೆ ಕಟ್ಟಿಹಾಕಿರುವುದು ನಿಜ, ಹೊಡೆದಿರುವುದು ನಿಜ, ಆದರೆ ಮಲ ತಿನ್ನಸಲಿಲ್ಲ. ಮಲದಿಂದ ಹೊಡೆದಿವಿ ಎಂದು ಹೇಳುತ್ತಾರೆ. ಅಂದರೆ ಮಲದಿಂದ ಅವನ ತಲೆಮೇಲೆ ಹೊಡೆಯಬಹುದು. ಮಾನ್ಯ ಅಧ್ಯಕ್ಷರೇ ಅವನ ಹೆಂಡತಿ ಹೇಳಿದ್ದಾಳೆ ಪಾಪ, ನನ್ನ ಗಂಡ ಭಾನುವಾರ ಅಕ್ಕಿ ತೆಗೆದುಕೊಂಡು ಬರುವುದಕ್ಕೆ ಹೋದವರು, ಗುರುವಾರ ಸಾಯಂಕಾಲ, ಭಾನುವಾರ ಬರುತ್ತಾನೆ ಹೊಸ ಬಟ್ಟೆ ಹಾಕಿಕೊಂಡು ಬರುತ್ತಾನೆ ಎಂದು ಏಕೆ ಹೊಸ ಬಟ್ಟೆ ಹಾಕಿಕೊಂಡು ಬರ್ತಾನ ಅವನು? ವೈದ್ಯರು ಹೇಳುತ್ತಾರೆ ಅವನ ಕೂದಲಲ್ಲಿ ಮಲ ಇತ್ತು ಎಂದು ಕೂದಲಿಲ್ಲಿ ಮಲ ಹೇಗೆ ಹೋಗುತ್ತದೆ ಮಾನ್ಯ ಉಪಾಧ್ಯಕ್ಷರೇ, ನಾನು ನೇರವಾಗಿ ನಿಮ್ಮ ಸರ್ಕಾರ ಮತ್ತು ಆಳುವ ಪಕ್ಷ ಕಾರಣ ಇದಕ್ಕೆ ಎಂದು ಹೇಳುತ್ತೇನೆ. ಈ ಪ್ರಕರಣಕ್ಕೆ ಮುಖ್ಯಮಂತ್ರಿಗಳು ರಾಜ್ಯದ ಜನತೆಯ ಕ್ಷಮೆಯನ್ನು ಕೇಳಬೇಕೆನ್ನುತ್ತೇನೆ. ಇಂತಹ ಪ್ರಕರಣ ನಡೆಯಬಾರದು. ಇದು ಕರ್ನಾಟಕಕ್ಕೇ ಅಪಕೀರ್ತಿ ಹಾಗೂ ಕಳಂಕವನ್ನು ತರುವಂಥದ್ದು. ಇವತ್ತು ಯಾವುದೇ ಜಾತಿಯವರು ಮಾಡಿದ್ದಾರೆ ಎಂಬುದು ಇದರಲ್ಲಿ ಬರುವುದಿಲ್ಲ ಇದು ನಮ್ಮ ಸಮಾಜದಲ್ಲಿ ಇರತಕ್ಕಂಥದ್ದು. ನಮ್ಮ ನಿಮ್ಮ ಪಕ್ಷದ ಕಾರ್ಯಕರ್ತರನ್ನು ನಾವು ಎಜ್ಯುಕೇಟ್ ಮಾಡಬೇಕಾಗುತ್ತದೆ.

ಇದನ್ನು ನೀವು ಮಾಡಬಾರದೆಂದು ತಿಳಿಸಬೇಕಾಗುತ್ತದೆ. ನಾವೂ ಅವರ ಜೊತೆಯಲ್ಲಿ ಶಾಮೀಲಾಗುತ್ತೇವೆಂದು ಹೇಳಿದರೆ ನೀವು ಅವರಿಗಿಂತ ಪಾಪಿಗಳು ಎನ್ನುವುದನ್ನು ಗಮನದಲ್ಲಿಡಬೇಕಾಗುತ್ತದೆ. ನಾನು ಈ ಸರಕಾರದಲ್ಲಿ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಕಳಕಳಿಯಿಂದ ಮನವಿ ಮಾಡುತ್ತಿದ್ದೇವೆ. ತಾವು ಇದನ್ನು ಲಘುವಾಗಿ ತೆಗೆದುಕೊಳ್ಳಬೇಡಿ. ಈ ಪ್ರಕರಣದಿಂದ ನಿಮ್ಮ ಪಕ್ಷಕ್ಕೆ ಸರಕಾರಕ್ಕೆ ಕೆಟ್ಟ ಹೆಸರು ಬಂದಿದೆ. ನೀವು ಬಹಳ ದೂರ ಹೋಗಿದ್ದೀರಿ. ನಾವು ಅಲ್ಲಿ ಕುಳಿತುಕೊಂಡಿದ್ದಾಗ ನೀವೇನು ಮಾತನಾಡಿದಿರಿ ಎನ್ನುವುದನ್ನು ....

ಶ್ರೀ ಎಂ. ವೀರಪ್ಪ ಮೊಯಿಲಿ : ನೀವು ಕೆಟ್ಟ ಹೆಸರು ತರಲಿಕ್ಕೆ ಪ್ರಯತ್ನ ಮಾಡುತ್ತಿದ್ದೀರಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಮುಖ್ಯ ಮಂತ್ರಿಗಳು ಕ್ಷಮಿಸಬೇಕು ನಾನು ಇದರಲ್ಲಿ ರಾಜಕೀಯ ಬೆರೆಸಿ ಮಾತನಾಡುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ಆನ್ ಮೆರಿಟ್ ಮಾತನಾಡೋಣ. ಕೆಟ್ಟ ಹೆಸರು ಬಂದಿದೆ ಎಂದು ಏಕೆ ತೀರ್ಪು ಕೊಡುತ್ತೀರಿ? ಅವಸರ ಬೇಡ ವಿಚಾರಣೆ ಮಾಡೋಣ. ನಾವು ಸರಿಯಾಗಿ ತನಿಖೆ ಮಾಡದಿದ್ದರೆ ಇಲ್ಲವೇ ಇದನ್ನು ಮುಚ್ಚಲಿಕ್ಕೆ ಪ್ರಯತ್ನ ಮಾಡಿದರೆ ಆಗ ಅದು ಬೇರೆ ವಿಚಾರ. ಆದರೆ ಇದರಲ್ಲಿ ಕೆಟ್ಟ ಹೆಸರು ಬಂದಿದೆ ಎಂದು ತೀರ್ಪು ಕೊಡಲಿಕ್ಕೆ ಹೋಗಬೇಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಆಯಿತು ನೀವು ಅದನ್ನು ಒಪ್ಪಬೇಡಿ. ಘಟನೆಯಾದ ತಕ್ಷಣ ನೀವು ಅಲ್ಲಿಗೆ ನಿಮ್ಮ ಮಂತ್ರಿಗಳನ್ನು ಒಬ್ಬರನ್ನು ಕಳುಹಿಸಿ ಇಲ್ಲವೇ ಐ.ಜಿ.ಪಿ. ಕಳುಹಿಸಿ ವಿಚಾರಣೆ ಮಾಡಿಸಿ ಮಾಹಿತಿ ಕಲೆಕ್ಟ್ ಮಾಡಿದ್ದರೆ ನಾನು ನಿಮ್ಮನ್ನು ಮೆಚ್ಚುತ್ತಿದ್ದೆ.....

ಶ್ರೀ ಎಂ. ವೀರಪ್ಪ ಮೊಯಿಲಿ : ಆಗ. ಮಂತ್ರಿಗಳನ್ನು ಕಳುಹಿಸಿ ಮುಚ್ಚಿಡಲಿಕ್ಕೆ ಪ್ರಯತ್ನ ಮಾಡುತ್ತಿದ್ದೀರಿ. ಆ ಧಾಟಿಯಲ್ಲಿ ನಿಮ್ಮ ಕಡೆಯಿಂದ ಮಾತುಗಳು ಬರುತ್ತಿತ್ತು.........

ಶ್ರೀ ಪಿ.ಜಿ.ಆರ್. ಸಿಂಧ್ಯ : ನಮ್ಮ ಮಂತ್ರಿ ಸಹೋದ್ಯೋಗಿಗಳಲ್ಲಿ ಅನೇಕ ಹಿರಿಯ ಸಚಿವರಿದ್ದಾರೆ. ರಂಗನಾಥ್ ಮತ್ತೊಬ್ಬರು ಗೌರವಾನ್ವಿತ ಮಂತ್ರಿಗಳಿದ್ದಾರೆ. ಅವರನ್ನು ಕಳುಹಿಸಿ ಇದರ ಬಗ್ಗೆ ವಿಚಾರಣೆ ಮಾಡಿಸಿದ್ದಿದ್ದರೆ ಆಗ ನಾನು ಹೇಳುತ್ತಿರಲಿಲ್ಲ. ನೀವು ಇದನ್ನು ಲಘವಾಗಿ ತೆಗೆದುಕೊಳ್ಳಬೇಡಿ. What is it that the government done so far?

ಶ್ರೀ ಟಿ.ಎಂ. ಮಂಜುನಾಥ್ : ನಾನು ಲಘುವಾಗಿ ತೆಗೆದುಕೊಂಡಿಲ್ಲ. ಆವೇಶದಲ್ಲಿ ಬಾಯಿ ಜೋರಾಗಿದೆ ಎಂದು ಹೇಳುವುದು ಸರಿಯಲ್ಲ. ಮುಚ್ಚಿ ಹಾಕಲಿಕ್ಕೆ ಯಾರೂ ಪ್ರಯತ್ನ ಮಾಡುತ್ತಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಿಮಗೆ ಕೊಟ್ಟಿರತಕ್ಕಂಥಾದ್ದು ಸಣ್ಣ ಇಲಾಖೆ. ಸ್ಮಾಲ್ ಸೇವಿಂಗ್ಸ್ ಅನ್ನು ಕೊಟ್ಟಿದ್ದಾರೆ. ನೀವು ಹೋಗಿದ್ದೀರಾ?

ಶ್ರೀ ಟಿ.ಎಂ. ಮಂಜುನಾಥ್ : ನಾನು ಹೋಗಲಿಲ್ಲ. ತಾವು ಹೇಳುತ್ತಿರುವುದು ಸರಿಯಿದೆ ಎಂದು ನಾನು ಹೇಳುತ್ತಿರುವುದು, ನಿಮಗೆ ವಿರೋಧವಾಗಿ ನಾನು ಹೇಳಲಿಲ್ಲ. ತಪ್ಪು ಅರ್ಥ ತಿಳಿಯಬೇಡಿ. ನೀವೇಕೆ ಉದ್ವೇಗವಾಗುತ್ತೀರಿ?

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು ಹೇಳುತ್ತಿರುವುದು ಎಲ್ಲಾ ಸರಿ ಇದೆ ಎಂದು ಹೇಳುತ್ತಿದ್ದೀರಿ. ಮಾನ್ಯ ಮುಖ್ಯ ಮಂತ್ರಿಗಳು ಸತ್ಯಕ್ಕೆ ದೂರವಾದುದೆಂದು ಹೇಳುತ್ತಾರೆ.

ಶ್ರೀ ಟಿ.ಎಂ. ಮಂಜುನಾಥ್ :ಶಾಂತಿಯಿಂದ ಮಾತನಾಡಿ ಉದ್ವೇಗದಿಂದ ಅರೋಪಣೆ ಮಾಡುವ ಹಾಗೆ ಮಾತನಾಡಬೇಡಿ. ಸರಿಯಾಗಿದೆ ಎಂದು ನಾನು ಹೇಳಲಿಲ್ಲ. ಆಪಾದನೆ ಬರತಕ್ಕಂತಹ ರೀತಿಯಲ್ಲಿ ಮಾತನಾಡುತ್ತಿದ್ದೀರಿ. ಮಾನ್ಯ ಮುಖ್ಯ ಮಂತ್ರಿಗಳು ಬರುವುದಕ್ಕಿಂತ ಮೊದಲು ಪ್ರಸ್ತಾವನೆ ಮಾಡಿದ್ದೆ. ಅವರು ಹೇಳಿದ್ದನ್ನೇ ನಾನು ಹೇಳಿದುದ್ದು.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾನು ಅವರಿಗೆ ಎಚ್ಚರಿಕೆಯನ್ನು ಕೊಡುತ್ತಿದ್ದೇನೆ. ಇಲ್ಲ ನೀವು ಮಾಡಿಲ್ಲ ನಮ್ಮ ಪಕ್ಷಕ್ಕೆ ಸಂಬಂಧವಿಲ್ಲ. ಹಾಗಾದರೋ ಕೊನೆಯ ಪಕ್ಷ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು ಯಾವುದೋ ಸಣ್ಣ ಪತ್ರಿಕೆಯಲ್ಲಿ ಬಂದಿದ್ದರೆ ಅದನ್ನು ಲಘುವಾಗಿ ತೆಗೆದುಕೊಳ್ಳಬಹುದಿತ್ತು. ಪ್ರಜಾವಾಣಿ ಪತ್ರಿಕೆಯಲ್ಲಿ ಎರಡು ಸಲ ಬಂದಿದೆ, ಅದನ್ನು ತಾವು ಗಮನದಲ್ಲಿಡಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ : ಕುಷ್ಟಗಿ ವಿಚಾರ ಕೂಡ ಅದೇ ಜವಾಬ್ದಾರಿಯುತವಾದ ಪತ್ರಿಕೆಯಲ್ಲಿ ಬಂದಿದ್ದು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಇದು ಗೊತ್ತೇ ಇಲ್ಲವೆಂದು ಹೇಳಿ. ಗೃಹ ಇಲಾಖೆ ನಿಮ್ಮ ಕಡೆ ನಮ್ಮ ಶಾಸಕರು ಇದರಲ್ಲಿ ಇನ್ವಾಲ್ವಾಗಿದ್ದಾರೆಂದು ಹೇಳುತ್ತಾರೆ. ಪತ್ರಿಕೆಯಲ್ಲಿ ವರದಿಯಾಗಿದೆ ಸ್ಥಳೀಯ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು ಇನ್ವಾಲ್ವ್ ಆಗಿದ್ದಾರೆಂದು ಹೇಳಿದ್ದಾರೆ. ಕಣ್ಣಪ್ಪ ಎನ್ನುವವರು 3 ದಿನವಾದ ಮೇಲೆ ದಲಿತರ ಹಾಸ್ಟೆಲ್ನಲ್ಲಿ ರಕ್ಷಣೆ ತೆಗೆದುಕೊಂಡು ನನಗೆ ಸರಕಾರ ರಕ್ಷಣೆ ನೀಡಿಲ್ಲವೆಂದು ಹೇಳುತ್ತಿದ್ದಾರೆ. ಸ್ಥಳೀಯ ಪೋಲೀಸರು ರಕ್ಷಣೆ ಕೊಟ್ಟಿಲ್ಲವೆಂದು ಹೇಳಿದ್ದಾರೆ. ನೀವು ಇಲ್ಲವೆಂದು ಅಲ್ಲಗಳೆಯಿರಿ ನಮಗೆ ಸಂಬಂಧವಿಲ್ಲವೆಂದು ಹೇಳಲಿ. ಎಲ್ಲಾ ಶಕ್ತಿ ಕೊಟ್ಟಿದ್ದಾರೆ. ಅದನ್ನು ನೀವು ಹೇಳಬಹುದು. ಆದರೆ ನಾನು ಹೇಳುತ್ತೇನೆ ಇದು ನಡೆದಿದೆ ಎಂದು. ಈ ಪ್ರಕರಣ ನಡೆದಿರುವುದು ನಿಜ. ನಾವು, ನಮ್ಮ ಪಕ್ಷದ ವತಿಯಿಂದಷ್ಟೇ ಅಲ್ಲ ಅನೇಕ ಅಧಿಕಾರಿಗಳ ಜೊತೆ ಮಾತನಾಡಿದ್ದೇವೆ. ಬೇರೆ ನಾಗರೀಕರ ಜೊತೆ ಮಾತನಾಡಿದ್ದೇವೆ.

ಜವಾಬ್ದಾರಿ ಜನಗಳ ಜೊತೆಯಲ್ಲಿ ನಾನು ಮಾತನಾಡಿದ್ದೇನೆ. ಇದರಲ್ಲಿ ರಾಜಕೀಯ ಬೆರೆಸಿ ಜನತಾದಳಕ್ಕೆ ವೋಟು ತೆಗೆದುಕೊಳ್ಳುವ ದೃಷ್ಟಿಯಿಂದ ನಾನು ಮಾತನಾಡುತ್ತಿಲ್ಲ. ಇಲ್ಲಿ ನಡೆದಿರತಕ್ಕಂಥ ಕೃತ್ಯ ಅಮಾನವೀಯವಾಗಿರತಕ್ಕಂಥದ್ದು, ಖಂಡನೀಯವಾಗಿರತಕ್ಕಂಥದ್ದು, ಇದರಿಂದಾಗಿ ಸಮಾಜದಲ್ಲಿ ಯಾರು ದಳ್ಳುರಿಗೆ ಒಳಗಾಗಿರತಕ್ಕಂಥ ಜನಗಳು ಯಾರಿದ್ದಾರೆ, ಅವರನ್ನು ಮತ್ತೆ ಈ ಸಮಾಜದಿಂದ ದೂರ ಕಳುಹಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ನೀವು ಇದನ್ನು ಯೋಚನೆ ಮಾಡಿ ಒಂದು ಸದನದ ಸಮಿತಿಯನ್ನು ಮಾಡಬೇಕು ಎಂದು ನಾನಂತೂ ಒತ್ತಾಯ ಮಾಡುತ್ತಿದ್ದೇನೆ. ಒಂದು ಸದನದ ಸಮಿತಿಯನ್ನು ಮಾಡಬೇಕು. ಇದರ ಬಗ್ಗೆ ಸದನದ ಸಮಿತಿ ಹೋಗಿ 15-20 ದಿವಸದಲ್ಲಿ ಒಂದು ವರದಿಯನ್ನು ತೆಗೆದುಕೊಂಡು ಬರಲಿ. ಆಮೇಲೆ ಗೊತ್ತಾಗುತ್ತದೆ. ಇದು ನಡೆದಿದೆಯೋ ಇಲ್ಲವೋ ಎಂದು ಹೇಳಿ.

ಆಮೇಲೆ ಮಾನ್ಯ ಮುಖ್ಯಮಂತ್ರಿಗಳು ನೋಡಿ ಸಿಂಧ್ಯಾ ಅವರೆ, ನೀವು ಹೇಳಿದ್ದೆಲ್ಲ ಸತ್ಯಕ್ಕೆ ದೂರವಾಗಿರತಕ್ಕಂಥದ್ದು, ಅದು ಸುಳ್ಳು ಎಂದು ಹೇಳಿದರೆ ನಾನು ಒಪ್ಪುತ್ತೇನೆ. ಅದರಿಂದ ಮಾನ್ಯ ಅಧ್ಯಕ್ಷರೇ, ತಾವೇನು ಇದನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ, ನಿಮಗೆ ವಂದಿಸಿ ಈ ಒಂದು ದಲಿತ ಕಣ್ಣಪ್ಪನ ಮೇಲೆ ಆಗಿರತಕ್ಕಂಥ ಅಮಾನುಷವಾಗಿರತಕ್ಕಂಥ ಕೃತ್ಯವನ್ನು ನಾನು ಖಂಡನೆ ಮಾಡುವುದರ ಜೊತೆಗೆ ಈ ವಿಚಾರದಲ್ಲಿ ಒಂದು ಸದನದ ಸಮಿತಿಯನ್ನು ರಚನೆ ಮಾಡಿ ಎರಡೂ ಮನೆಗಳ ಸದನದ ಸಮಿತಿಯನ್ನು ರಚನೆ ಮಾಡಿ ಸತ್ಯವನ್ನು ಶೋಧನೆ ಮಾಡಿಸಬೇಕು ಎಂದು ಹೇಳಿ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಒತ್ತಾಯವನ್ನು ಮಾಡಿ ತತ್‌ಕ್ಷಣ ಆ ಕಣ್ಣಪ್ಪನಿಗೆ ರಕ್ಷಣೆ ಬೇಕು ಎಂದು ಕೇಳಿದ್ದಾರೆ. ರಕ್ಷಣೆಯನ್ನು ಕೊಡುವುದಕ್ಕೆ ತಾವು ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿ ನಾನು ಒತ್ತಾಯ ಮಾಡುತ್ತೇನೆ.

+ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಉಪಾಧ್ಯಕ್ಷರೇ, ಕಳೆದ ಒಂದು ವಾರದಿಂದ ದೇಶದ ಅನೇಕ ಪ್ರಮುಖ ಪತ್ರಿಕೆಗಳಲ್ಲಿ ಮತ್ತು ನಮ್ಮ ರಾಜ್ಯದ ಪ್ರಮುಖ ಪತ್ರಿಕೆಗಳಲ್ಲಿ ಈ ಘಟನೆ ಬಗ್ಗೆ ಅನೇಕ ವರದಿಗಳು ಬಂದಿವೆ. ಈ ಘಟನೆ ನಡೆದ ಮಾರನೇ ದಿವಸ ನಾನು ಈ ಸದನದ ಸಮಿತಿಯ ಜೊತೆ ಕೇರಳ ಮತ್ತು ತಮಿಳುನಾಡಿಗೆ ಪ್ರವಾಸ ಹೋಗಲೇಬೇಕಾಗಿತ್ತು. ಅದರಿಂದ ಬೆಳಿಗ್ಗೆ 7 ಗಂಟೆಗೆ ನಾವು ವಿಮಾನದಲ್ಲಿ ತಿರುವಂತನಪುರಕ್ಕೆ ಹೊರಟುಹೋದೆವು. ನಾಲ್ಕು ದಿವಸದ ನಂತರ ಪ್ರವಾಸ ಮುಗಿಸಿ ನಾನು ಬಂದೆ. ಬಂದಮೇಲೆ ನಾನು ನಡೆದಿರತಕ್ಕಂಥದ್ದು ಏನು, ಇದರಲ್ಲಿ ಸತ್ಯವೆಷ್ಟು ಅಸತ್ಯವೆಷ್ಟು ಎಂದು ತಿಳಿದುಕೊಳ್ಳುವಂಥ ಒಂದು ಪ್ರಯತ್ನವನ್ನು ನಾನು ಮಾಡಿದೆ. ನನಗೆ ಗೊತ್ತಿರುವ ರೀತಿಯಲ್ಲಿ ಅದರಲ್ಲೂ ಸಹ ನಮ್ಮ ಜಿಲ್ಲೆ ಕೋಲಾರ ಜಿಲ್ಲೆ ಈ ಎಡ ಶಕ್ತಿಗಳನ್ನು ಬೆಳೆಸತಕ್ಕಂಥದ್ದಕ್ಕೆ ಬಹಳ ಪ್ರಮುಖವಾದ ಸ್ಥಾನವನ್ನು ವಹಿಸಿರತಕ್ಕಂಥ ಜಿಲ್ಲೆ. ಒಂದು ಕಾಲದಲ್ಲಿ ಕಮ್ಯುನಿಸ್ಟ್ ಪಾರ್ಟಿ ಬಹಳ ಪ್ರಬಲವಾಗಿ ಬೆಳೆದಿರತಕ್ಕಂಥ ಜಿಲ್ಲೆ. ಈಗಲೂ ಸಹ ಈ ಎಡ ಶಕ್ತಿಗಳಿಗೆ ಶಕ್ತಿಯನ್ನು ತುಂಬುತ್ತಿರತಕ್ಕಂಥ ಜಿಲ್ಲೆ. ಇಂಥ ಜಿಲ್ಲೆಯಲ್ಲಿ ಈ ರೀತಿಯಾದಂಥ ಘಟನೆ ನಡೆದಿದೆ ಎನ್ನತಕ್ಕಂಥದ್ದನ್ನು ಪತ್ರಿಕೆಯಲ್ಲಿ ಓದಿ ನಾನು ಬಹಳ ಅವಮಾನಿತನಾದೆ. ನನಗೆ ನಮ್ಮ ಜಿಲ್ಲೆಯ ಬಗ್ಗೆ ಎಂಥ ಶಕ್ತಿ ಎಡ ಪ್ರಜಾಪ್ರಭುತ್ವವಾದಿ ಶಕ್ತಿಗಳು ಬೆಳೆದಿರತಕ್ಕಂಥ ಜಿಲ್ಲೆಯಲ್ಲಿ ಇಂಥ ಅಮಾನುಷವಾದಂಥ ಒಂದು ಕೆಲಸ ನಡೆದಿದೆ ಎಂದು ವರಿಯಾಗಿದೆಯೆಲ್ಲಾ ಎಂದು ಆ ವರದಿಯನ್ನು ನೋಡಿ ನನಗೆ ಬಹಳ ವ್ಯಸನವಾಯಿತು, ನೋವಾಯಿತು.

ಆ ದೃಷ್ಟಿಯಿಂದ ಇಲ್ಲಿ ನಡೆದಿರತಕ್ಕಂಥದ್ದು ಏನು ಎಂದು ತಿಳಿದುಕೊಳ್ಳುವಂಥ ಪ್ರಯತ್ನವನ್ನು ಮಾಡಿದೆ. ನಾನು ಆ ತಾಲ್ಲೂಕಿನವನು. ತಾಲ್ಲೂಕು ಅಭಿವೃದ್ಧಿ ಮಂಡಲಿಯ ಅಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. ಆ ಹರಟಿ ಗ್ರಾಮದಲ್ಲಿ ಒಂದು

ಪ್ರೌಢಶಾಲೆಯನ್ನು ಸ್ಥಾಪಿಸಿ ಅತ್ಯಂತ ಉನ್ನತವಾದ ಮಟ್ಟದಲ್ಲಿ ವಿದ್ಯಾಭ್ಯಾಸವನ್ನು ಕೊಡಿಸತಕ್ಕಂಥದ್ದಕ್ಕೆ ಅದಕ್ಕೆ ನಾನೂ ಸಹಾ ನೆರವಾಗಿದ್ದೇನೆ.. ಎರಡು ಸಾರಿ ನಾನು ತಾಲ್ಲೂಕು ಅಭಿವೃದ್ಧಿ ಮಂಡಲಿ ಅಧ್ಯಕ್ಷನಾಗಿದ್ದೆ. ಆ ಊರಿನಲ್ಲಿ ವ್ಯವಸಾಯದಲ್ಲಾಗಲಿ, ವಿದ್ಯಾಭ್ಯಾಸದಲ್ಲಾಗಲಿ ಎಲ್ಲದರಲ್ಲೂ ಪ್ರಗತಿಪರವಾಗಿರತಕ್ಕಂಥ ಒಂದು ವಾತಾವರಣವನ್ನು ಅಲ್ಲಿ ಮೂಡಿಸಿ ಆ ಗ್ರಾಮದ ಏಳಿಗೆಗೆ ನಾನೂ ಕೂಡ ಶ್ರಮಿಸಿದ್ದೇನೆ. ಅದೂ ಅಲ್ಲದೆ ಹಿಂದೆ ಸ್ವತಂತ್ರ್ಯ ಪೂರ್ವದಲ್ಲಿ ಸ್ವತಂತ್ರಕ್ಕಾಗಿ ಹೋರಾಟ ಮಾಡಿರತಕ್ಕಂಥ ದಿವಂಗತ ನಾರಾಯಣಗೌಡರು ಇಲ್ಲಿ ಮಂತ್ರಿಗಳಾಗಿದ್ದರು.

ಅವರು ಹುಟ್ಟಿ ಬೆಳೆದಿರತಕ್ಕ ಹರಟಿ ಊರು ಅವರ ಊರಿನಲ್ಲಿ, ಇಂತಹ ಗ್ರಾಮದಲ್ಲಿ ಈ ರೀತಿ ಘಟನೆ ನಡೆದಿದೆ ಎನ್ನತಕ್ಕದ್ದನ್ನು ತಿಳಿದು ನನಗೆ ವ್ಯಸನ ಸಹ ಆಯಿತು. ಈ ವಿಚಾರದ ಬಗ್ಗೆ ಅನೇಕ ಸ್ನೇಹಿತರಿಗೆ ಗೊತ್ತಿದೆ. ಆ ಊರಿನಲ್ಲಿ ಸ್ವಲ್ಪ ಹೆಚ್ಚು ಕಡಿಮೆ 20-25 ಜನ, ಇಲ್ಲಿ ಕುಳಿತು ಅವರುಗಳ ಹೆಸರು ಹೇಳಬಲ್ಲೆ. ಅವರಿಗೆ ನಿಕಟವಾದ ಸಂಪರ್ಕ ಇರತಕ್ಕ ಹಳ್ಳಿ. ಅದು ನನ್ನ ಕ್ಷೇತ್ರಕ್ಕೆ ಬರದೇ ಇದ್ದರೂ ಸಹ ಪಕ್ಕದ ಕೋಲಾರ ವಿಧಾನಸಭೆ ಕ್ಷೇತ್ರ ಆಗಿದ್ದರೂ ಸಹ ಆ ಹಳ್ಳಿ ಬಗ್ಗೆ ನನಗೆ ನಿಕಟವಾದಂತಹ ಪರಿಚಯ ಮತ್ತು ನಿಕಟವಾದ ಸಂಪರ್ಕ ಹೊಂದಿರತಕ್ಕವನು ನಾನು. ಅಲ್ಲಿ ಅವತ್ತಿನ ದಿವಸ ನಡೆದಿರತಕ್ಕದ್ದು ಏನು ಎಂದರೆ ಕಣ್ಣಪ್ಪ ಎನ್ನತಕ್ಕ ವ್ಯಕ್ತಿ, ಅವನಿಗೆ ಕುಡಿಯುವ ಚಟ ಇತ್ತು. ಅವನಿಗೆ ಆ ಚಟ ಇದ್ದುದು ಯಾರೂ ಇಲ್ಲ ಎಂದು ಹೇಳುವ ಪರಿಸ್ಥಿತಿ ಇಲ್ಲ. ಅವನು ಕುಡಿದು ಬಂದು ಅಲ್ಲಿ ಊರಿನಲ್ಲಿರತಕ್ಕ ಕೆಲವು ಮುಖಂಡರ ಬಗ್ಗೆ ಅನಾವಶ್ಯಕವಾಗಿ ಅವಾಚ್ಯ ಶಬ್ದಗಳನ್ನು ಬಳಸಿದ್ದಾನೆ. ನಾನು ತಿಳಿದುಕೊಂಡಿರತಕ್ಕ ಪ್ರಕಾರ ಆತ ಆ ಶಬ್ದಗಳನ್ನು ಬಳಸಿರತಕ್ಕ ಪರಿಸ್ಥಿತಿಯಲ್ಲಿ ಅಲ್ಲಿರತಕ್ಕ ಕೆಲವರು ಆತನನ್ನು ಕಂಬಕ್ಕೆ ಕರೆದುಕೊಂಡು ಹೋಗಿ ಕಟ್ಟಿದ್ದಾರೆ. ಕಂಬಕ್ಕೆ ಕಟ್ಟಿ ಅಲ್ಲಿ ಆತನನ್ನು ಹೊಡೆದಿದ್ದಾರೆ.

ಹೊಡೆದು ಮೇಲೆ ಆತನು ಸ್ವಾಭಾವಿಕವಾಗಿ ಹೆದರಿ ಮಲ ಜಲ ಎರಡನ್ನೂ ಮಾಡಿಕೊಂಡಿದ್ದಾನೆ. ಇವೆಲ್ಲಾ ಆದ ಮೇಲೆ ಕಂಬಕ್ಕೆ ಕಟ್ಟಿರತಕ್ಕವನನ್ನು ಬಿಚ್ಚಿದಾಗ ಅಲ್ಲಿಯೇ ಆತ ಬಿದ್ದ. ಜಲ ಮಲ ಅಲ್ಲಿ ಆಗಿತ್ತು. ಆಗ ಮೈಮೇಲೆ ಇವೆಲ್ಲಾ ಅಂಟಿಕೊಂಡಿತ್ತು.

ಉಪಾಧ್ಯಕ್ಷರು : ತಾವು ಆತನ ಮೇಲೆ ದೌರ್ಜನ್ಯ ನಡೆದಿಲ್ಲ ಎಂದು ಹೇಳುತ್ತೀರಾ ಹೇಗೆ?

ಶ್ರೀ ಸಿ. ಬೈರೇಗೌಡ : ಪೂರ್ತಿಯಾಗಿ ನಾನು ಹೇಳುತ್ತೇನೆ. ಆಮೇಲೆ ಕೆಲವರು ಮಹಿಳೆಯರು ಬಂದು ಪೊರಕೆ ತೆಗೆದುಕೊಂಡು ಬಂದು ಹೊಡೆದಿದ್ದಾರೆ. ಪೊರಕೆಯನ್ನು ತೆಗೆದು ಆತನ ಮೇಲೆ ಹೊಡೆದಿದ್ದಾರೆ. ಅಲ್ಲಿರತಕ್ಕ ಮಲದಲ್ಲಿ ಅದ್ದಿ ಆತನನ್ನು ಹೊಡೆದಿದ್ದಾರೆ. ಜಾತಿಯನ್ನು ಹಿಡಿದು ನಿಂದನೆ ಮಾಡಿದ್ದಾರೆ. ಇದಾದ ಮೇಲೆ ಆತ ಸುಸ್ತಾದ. ಬಹಳ ಸುಸ್ತಾದ ಆತ ಎಲ್ಲಿ ಸತ್ತು ಹೋಗುತ್ತಾನೋ ಎನ್ನುವ ಕಾರಣಕ್ಕೋಸ್ಕರ ಆತನನ್ನು ಬಿಟ್ಟರು. ಆತನನ್ನು ಬಿಟ್ಟ ಮೇಲೆ ಮತ್ತು ಏರಿದ್ದ ಕಾರಣ ಆತನಿಗೆ ಮಜ್ಜಿಗೆಯನ್ನೋ ಗಿಜ್ಜಿಗೆಯನ್ನೋ ಕುಡಿಸತಕ್ಕ ಪ್ರಯತ್ನ ಕೂಡ ನಡೆದಿದೆ. ಈ ಒಂದು ಸಂದರ್ಭದಲ್ಲಿದೆ. ಪ್ರಾರಂಭದಲ್ಲಿ ಬ್ಲಾಕ್ ಕಾಂಗ್ರೆಸ್(ಐ) ಪ್ರೆಸಿಡೆಂಟ್ ವೆಂಕಟರಾಮೇಗೌಡರೂ ಸಹ ಇದ್ದರು.

ಇವೆಲ್ಲಾ ನಡೆದಿದ್ದಾಗ ಅವರೂ ಪ್ರತ್ಯಕ್ಷವಾಗಿ ಇದ್ದರು. ಇವನು ಸಾಯುತ್ತಾನೆ ಎನ್ನತಕ್ಕ ವಿಚಾರವನ್ನು ಅಲ್ಲಿ ಗಮನಿಸಿದಾಗ ಆತನ ಕೈಕಟ್ಟಿ ಹಾಕಿದ್ದನ್ನು ಬಿಡಿಸತಕ್ಕ ಪ್ರಯತ್ನ ಕೂಡ ಮಾಡಿದ್ದಾರೆ. ಇದು ವಾಸ್ತವಿಕವಾಗಿ ನಡೆದಿರತಕ್ಕ ವಿಚಾರ. ಇದು ನಡೆದಿರತಕ್ಕದ್ದನ್ನು ಕೂಡ ಇವತ್ತು ಮುಚ್ಚಿ ಹಾಕತಕ್ಕ ಪ್ರಯತ್ನ ಬಹಳ ತೀವ್ರವಾಗಿ

ಪ್ರೌಢಶಾಲೆಯನ್ನು ಸ್ಥಾಪಿಸಿ ಅತ್ಯಂತ ಉನ್ನತವಾದ ಮಟ್ಟದಲ್ಲಿ ವಿದ್ಯಾಭ್ಯಾಸವನ್ನು ಕೊಡಿಸತಕ್ಕಂಥದ್ದಕ್ಕೆ ಅದಕ್ಕೆ ನಾನೂ ಸಹಾ ನೆರವಾಗಿದ್ದೇನೆ.. ಎರಡು ಸಾರಿ ನಾನು ತಾಲ್ಲೂಕು ಅಭಿವೃದ್ಧಿ ಮಂಡಲಿ ಅಧ್ಯಕ್ಷನಾಗಿದ್ದೆ. ಆ ಊರಿನಲ್ಲಿ ವ್ಯವಸಾಯದಲ್ಲಾಗಲಿ, ವಿದ್ಯಾಭ್ಯಾಸದಲ್ಲಾಗಲಿ ಎಲ್ಲದರಲ್ಲೂ ಪ್ರಗತಿಪರವಾಗಿರತಕ್ಕಂಥ ಒಂದು ವಾತಾವರಣವನ್ನು ಅಲ್ಲಿ ಮೂಡಿಸಿ ಆ ಗ್ರಾಮದ ಏಳಿಗೆಗೆ ನಾನೂ ಕೂಡ ಶ್ರಮಿಸಿದ್ದೇನೆ. ಅದೂ ಅಲ್ಲದೆ ಹಿಂದೆ ಸ್ವತಂತ್ರ್ಯ ಪೂರ್ವದಲ್ಲಿ ಸ್ವತಂತ್ರಕ್ಕಾಗಿ ಹೋರಾಟ ಮಾಡಿರತಕ್ಕಂಥ ದಿವಂಗತ ನಾರಾಯಣಗೌಡರು ಇಲ್ಲಿ ಮಂತ್ರಿಗಳಾಗಿದ್ದರು.

ಅವರು ಹುಟ್ಟಿ ಬೆಳೆದಿರತಕ್ಕ ಹರಟಿ ಊರು ಅವರ ಊರಿನಲ್ಲಿ, ಇಂತಹ ಗ್ರಾಮದಲ್ಲಿ ಈ ರೀತಿ ಘಟನೆ ನಡೆದಿದೆ ಎನ್ನತಕ್ಕದ್ದನ್ನು ತಿಳಿದು ನನಗೆ ವ್ಯಸನ ಸಹ ಆಯಿತು. ಈ ವಿಚಾರದ ಬಗ್ಗೆ ಅನೇಕ ಸ್ನೇಹಿತರಿಗೆ ಗೊತ್ತಿದೆ. ಆ ಊರಿನಲ್ಲಿ ಸ್ವಲ್ಪ ಹೆಚ್ಚು ಕಡಿಮೆ 20-25 ಜನ, ಇಲ್ಲಿ ಕುಳಿತು ಅವರುಗಳ ಹೆಸರು ಹೇಳಬಲ್ಲೆ. ಅವರಿಗೆ ನಿಕಟವಾದ ಸಂಪರ್ಕ ಇರತಕ್ಕ ಹಳ್ಳಿ. ಅದು ನನ್ನ ಕ್ಷೇತ್ರಕ್ಕೆ ಬರದೇ ಇದ್ದರೂ ಸಹ ಪಕ್ಕದ ಕೋಲಾರ ವಿಧಾನಸಭೆ ಕ್ಷೇತ್ರ ಆಗಿದ್ದರೂ ಸಹ ಆ ಹಳ್ಳಿ ಬಗ್ಗೆ ನನಗೆ ನಿಕಟವಾದಂತಹ ಪರಿಚಯ ಮತ್ತು ನಿಕಟವಾದ ಸಂಪರ್ಕ ಹೊಂದಿರತಕ್ಕವನು ನಾನು. ಅಲ್ಲಿ ಅವತ್ತಿನ ದಿವಸ ನಡೆದಿರತಕ್ಕದ್ದು ಏನು ಎಂದರೆ ಕಣ್ಣಪ್ಪ ಎನ್ನತಕ್ಕ ವ್ಯಕ್ತಿ, ಅವನಿಗೆ ಕುಡಿಯುವ ಚಟ ಇತ್ತು. ಅವನಿಗೆ ಆ ಚಟ ಇದ್ದುದು ಯಾರೂ ಇಲ್ಲ ಎಂದು ಹೇಳುವ ಪರಿಸ್ಥಿತಿ ಇಲ್ಲ. ಅವನು ಕುಡಿದು ಬಂದು ಅಲ್ಲಿ ಊರಿನಲ್ಲಿರತಕ್ಕ ಕೆಲವು ಮುಖಂಡರ ಬಗ್ಗೆ ಅನಾವಶ್ಯಕವಾಗಿ ಅವಾಚ್ಯ ಶಬ್ದಗಳನ್ನು ಬಳಸಿದ್ದಾನೆ. ನಾನು ತಿಳಿದುಕೊಂಡಿರತಕ್ಕ ಪ್ರಕಾರ ಆತ ಆ ಶಬ್ದಗಳನ್ನು ಬಳಸಿರತಕ್ಕ ಪರಿಸ್ಥಿತಿಯಲ್ಲಿ ಅಲ್ಲಿರತಕ್ಕ ಕೆಲವರು ಆತನನ್ನು ಕಂಬಕ್ಕೆ ಕರೆದುಕೊಂಡು ಹೋಗಿ ಕಟ್ಟಿದ್ದಾರೆ. ಕಂಬಕ್ಕೆ ಕಟ್ಟಿ ಅಲ್ಲಿ ಆತನನ್ನು ಹೊಡೆದಿದ್ದಾರೆ.

ಹೊಡೆದು ಮೇಲೆ ಆತನು ಸ್ವಾಭಾವಿಕವಾಗಿ ಹೆದರಿ ಮಲ ಜಲ ಎರಡನ್ನೂ ಮಾಡಿಕೊಂಡಿದ್ದಾನೆ. ಇವೆಲ್ಲಾ ಆದ ಮೇಲೆ ಕಂಬಕ್ಕೆ ಕಟ್ಟಿರತಕ್ಕವನನ್ನು ಬಿಚ್ಚಿದಾಗ ಅಲ್ಲಿಯೇ ಆತ ಬಿದ್ದ. ಜಲ ಮಲ ಅಲ್ಲಿ ಆಗಿತ್ತು. ಆಗ ಮೈಮೇಲೆ ಇವೆಲ್ಲಾ ಅಂಟಿಕೊಂಡಿತ್ತು.

ಉಪಾಧ್ಯಕ್ಷರು : ತಾವು ಆತನ ಮೇಲೆ ದೌರ್ಜನ್ಯ ನಡೆದಿಲ್ಲ ಎಂದು ಹೇಳುತ್ತೀರಾ ಹೇಗೆ?

ಶ್ರೀ ಸಿ. ಬೈರೇಗೌಡ : ಪೂರ್ತಿಯಾಗಿ ನಾನು ಹೇಳುತ್ತೇನೆ. ಆಮೇಲೆ ಕೆಲವರು ಮಹಿಳೆಯರು ಬಂದು ಪೊರಕೆ ತೆಗೆದುಕೊಂಡು ಬಂದು ಹೊಡೆದಿದ್ದಾರೆ. ಪೊರಕೆಯನ್ನು ತೆಗೆದು ಆತನ ಮೇಲೆ ಹೊಡೆದಿದ್ದಾರೆ. ಅಲ್ಲಿರತಕ್ಕ ಮಲದಲ್ಲಿ ಅದ್ದಿ ಆತನನ್ನು ಹೊಡೆದಿದ್ದಾರೆ. ಜಾತಿಯನ್ನು ಹಿಡಿದು ನಿಂದನೆ ಮಾಡಿದ್ದಾರೆ. ಇದಾದ ಮೇಲೆ ಆತ ಸುಸ್ತಾದ. ಬಹಳ ಸುಸ್ತಾದ ಆತ ಎಲ್ಲಿ ಸತ್ತು ಹೋಗುತ್ತಾನೋ ಎನ್ನುವ ಕಾರಣಕ್ಕೋಸ್ಕರ ಆತನನ್ನು ಬಿಟ್ಟರು. ಆತನನ್ನು ಬಿಟ್ಟ ಮೇಲೆ ಮತ್ತು ಏರಿದ್ದ ಕಾರಣ ಆತನಿಗೆ ಮಜ್ಜಿಗೆಯನ್ನೋ ಗಿಜ್ಜಿಗೆಯನ್ನೋ ಕುಡಿಸತಕ್ಕ ಪ್ರಯತ್ನ ಕೂಡ ನಡೆದಿದೆ. ಈ ಒಂದು ಸಂದರ್ಭದಲ್ಲಿದೆ. ಪ್ರಾರಂಭದಲ್ಲಿ ಬ್ಲಾಕ್ ಕಾಂಗ್ರೆಸ್(ಐ) ಪ್ರೆಸಿಡೆಂಟ್ ವೆಂಕಟರಾಮೇಗೌಡರೂ ಸಹ ಇದ್ದರು.

ಇವೆಲ್ಲಾ ನಡೆದಿದ್ದಾಗ ಅವರೂ ಪ್ರತ್ಯಕ್ಷವಾಗಿ ಇದ್ದರು. ಇವನು ಸಾಯುತ್ತಾನೆ ಎನ್ನತಕ್ಕ ವಿಚಾರವನ್ನು ಅಲ್ಲಿ ಗಮನಿಸಿದಾಗ ಆತನ ಕೈಕಟ್ಟಿ ಹಾಕಿದ್ದನ್ನು ಬಿಡಿಸತಕ್ಕ ಪ್ರಯತ್ನ ಕೂಡ ಮಾಡಿದ್ದಾರೆ. ಇದು ವಾಸ್ತವಿಕವಾಗಿ ನಡೆದಿರತಕ್ಕ ವಿಚಾರ. ಇದು ನಡೆದಿರತಕ್ಕದ್ದನ್ನು ಕೂಡ ಇವತ್ತು ಮುಚ್ಚಿ ಹಾಕತಕ್ಕ ಪ್ರಯತ್ನ ಬಹಳ ತೀವ್ರವಾಗಿ

ಇದೊಂದು ಕಟ್ಟುಕಥೆಯೆಂದೇ ಇಟ್ಟುಕೊಳ್ಳೋಣ. ಈ ರೀತಿ ಹೇಳುವುದಕ್ಕೆ ಅಧಿಕಾರಿಗಳಿಗೆ ಅಧಿಕಾರವಿದೆಯೇ? ಈ ರೀತಿ ಹೇಳುವುದಕ್ಕೆ ಅಧಿಕಾರವಿರುವುದು ನ್ಯಾಯಾಲಯಕ್ಕೆ ಮಾತ್ರ. ಕೃತ್ಯ ನಡೆದಿದೆಯೆಂದು ದೂರು ಬಂದ ತಕ್ಷಣ ಪ್ರಕರಣವನ್ನು ದಾಖಲಿಸಬೇಕಾಗುತ್ತದೆ, ನಂತರ ಕೃತ್ಯವೆಸಗಿದವರನ್ನು ಬಂಧನಕ್ಕೊಳಪಡಿಸಬೇಕಾಗುತ್ತದೆ ಸಂಬಂಧಪಟ್ಟ ಅಧಿಕಾರಿಗೆ ಈ ಪ್ರಕರಣವನ್ನು ವಹಿಸಿ ಅವರಿಂದ ವಿಚಾರಣೆ ನಡೆಸಿ ಕೋರ್ಟಿನಲ್ಲಿ ಆಪಾದನೆ ಪಟ್ಟಿ ಸಲ್ಲಿಸಬೇಕು. ಇದಾದ ನಂತರ ಕೋರ್ಟಿನಲ್ಲಿ ವಿಚಾರಣೆಯಾಗಿ ನ್ಯಾಯಾಧೀಶರಿಂದ ತೀರ್ಪು ಬರುತ್ತದೆ. ಇದಾವುದೇ ರೀತಿಯ ಕ್ರಮವನ್ನು ಅನುಸರಿಸಿಲ್ಲ. ಕೃತ್ಯಕ್ಕೊಳಪಟ್ಟ ವ್ಯಕ್ತಿ ಇವೊತ್ತು ಎಲ್ಲಿದ್ದಾನೆಂಬುದೂ ಸಹ ಗೊತ್ತಿಲ್ಲ. ಪತ್ರಿಕೆಗಳಲ್ಲಿ ಬಂದ ವರದಿಗಳ ಆಧಾರದ ಮೇಲೆ ಆತನ ಮನೆ ಎಲ್ಲಿದೆಯೆಂಬುದು ಗೊತ್ತಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಬೈರೇಗೌಡರೇ ಒಂದು ವೇಳೆ ಕೃತ್ಯ ನಡೆದಿದ್ದರೆ ಅವರನ್ನು ಯಾರೂ ಕೂಡ ಬಚಾವ್ ಮಾಡಬೇಕಾದ ಅಗತ್ಯವಿಲ್ಲ. ಮತ್ತು ಇದರಲ್ಲಿ ರಾಜಕೀಯ ಮಾಡಬೇಕಾದ ಅಗತ್ಯವೂ ಇಲ್ಲ. ಈಗ ನೀವು ಅಲ್ಲಿಗೆ ಹೋಗಿ ಇದರ ಬಗ್ಗೆ ವಿಚಾರಿಸಿ, ನಂತರ ಕಣ್ಣಪ್ಪನ ಮನೆಗೆ ಒಂದು ನಿಮಿಷ ಹೋಗಿ ಬರೋಣ. ಪ್ರಕರಣದ ಬಗ್ಗೆ ಪೋಲೀಸರು ಯಾವುದೇ ಕ್ರಮ ತೆಗೆದುಕೊಂಡಿಲ್ಲವೆಂದು ನಿಮ್ಮ ಗಮನಕ್ಕೆ ಬಂದಿದ್ದರೆ ನೀವು ಸಬ್ ಇನ್ಸ್‌ಪೆಕ್ಟರ್‌ರವರಿಗೋ, ಸರ್ಕಲ್ ಇನ್ಸ್‌ಪೆಕ್ಟರ್‌ರವರಿಗೋ ಇಲ್ಲವೇ ಸೂಪರಿಂಟೆಂಡೆಂಟ್ ಆಫ್ ಪೋಲೀಸಿನವರಿಗೆ ದೂರವಾಣಿ ಮುಖಾಂತರ ವಿಷಯ ತಿಳಿಸಬಹುದಿತ್ತಲ್ಲವೇ?

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಈ ವಿಷಯದಲ್ಲಿ ಸರ್ಕಾರ ತನ್ನ ಜವಾಬ್ದಾರಿ ನಿರ್ವಹಿಸಲಿಲ್ಲ. ಈ ಪ್ರಕರಣವನ್ನು ದಾಖಲು ಮಾಡಬೇಕು. ಇವರು ತಮ್ಮ ಮನ ಬಂದಂತೆ ವರ್ತಿಸುತ್ತಿದ್ದಾರೆ. ಒಬ್ಬ ಹರಿಜನ ವ್ಯಕ್ತಿ ಮೇಲೆ ಇಂತಹ ಅಮಾನುಷ ಕೃತ್ಯ ನಡೆದಿರುವುದರ ಬಗ್ಗೆ ಆಡಳಿತ ಪಕ್ಷದವರು ಇಷ್ಟು ಹಗುರವಾಗಿ ಮಾತನಾಡತಕ್ಕಂಥಾದ್ದು ಸರಿಯಲ್ಲ. ಇದರ ಬಗ್ಗೆ ಒಂದು ಸದನ ಸಮಿತಿ ನೇಮಕ ಮಾಡಿ ತನಿಖೆಯಾಗಬೇಕೆಂದು ಹೇಳುತ್ತಿದ್ದೇನೆ. ಇದುವರೆವಿಗೂ ಸರ್ಕಾರ ಬದುಕಿತ್ತೇ? ಕೃತ್ಯಕ್ಕೆ ಸಂಬಂಧಪಟ್ಟವರನ್ನು ಇದುವರೆವಿಗೂ ಬಂಧಿಸಿಲ್ಲ. ಸ್ಥಳಕ್ಕೆ ಜಿಲ್ಲಾ ಉಸ್ತುವಾರಿ ಮಂತ್ರಿಗಳು ಸಹ ಹೋಗಿಲ್ಲ. ಈ ವಿಷಯವನ್ನು ಅಷ್ಟು ಹಗುರವಾಗಿ ತೆಗೆದುಕೊಳ್ಳತಕ್ಕದ್ದಲ್ಲಿ.

4.00 ಪಿ.ಎಂ

ಶ್ರೀ ಸಿ. ಬೈರೇಗೌಡ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಕಾಗೋಡು ತಿಮ್ಮಪ್ಪನವರು ಇದರ ಬಗ್ಗೆ ಅಧಿಕಾರಿಗಳಿಗೆ ಹೇಳಬಹುದಾಗಿತ್ತಲ್ಲಾ ಎನ್ನತಕ್ಕ ಪ್ರಶ್ನೆಯನ್ನು ಕೇಳಿದರು. ನಾನು ಕಾಗೋಡು ತಿಮ್ಮಪ್ಪನವರು ಹೇಳುವವರೆಗೆ ಕಾಯಲಿಲ್ಲ. ಯಾರನ್ನು ಭೇಟಿ ಮಾಡಬೇಕೋ, ಯಾರಿಗೆ ಹೇಳಬೇಕೋ ಅದನ್ನು ಹೇಳಿಯೇ ಇದ್ದೇನೆ. ಅದನ್ನೆಲ್ಲಾ ಇಲ್ಲ ತರತಕ್ಕಂಥದ್ದು ಅನಾವಶ್ಯಕವೆನ್ನತಕ್ಕ ಕಾರಣಕ್ಕೋಸ್ಕರ ಅದನ್ನು ಇಲ್ಲಿ ಹೇಳಲಿಲ್ಲವಷ್ಟೆ ವಿನಹ, ನಾನು ಕಾಗೋಡುತಿಮ್ಮಪ್ಪನವರಿಂದ ಹೇಳಿಸಿಕೊಂಡು ಕೆಲಸ ಮಾಡತಕ್ಕಂಥ ಜಾಯಮಾನದಲ್ಲಿ ಹುಟ್ಟಿಲ್ಲ. ಆದ್ದರಿಂದ ಇವತ್ತು ಸರ್ಕಾರದಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಇವತ್ತು ಆ ದೌರ್ಜನ್ಯದ ಪ್ರಕರಣವನ್ನು ಮುಚ್ಚಿ ಹಾಕತಕ್ಕ ಸರ್ವಪ್ರಯತ್ನ ನಡೆದಿದೆ. ಮುಖ್ಯಮಂತ್ರಿಗಳ ಹೇಳಿಕೆ ಸಹ ಅದೇ ಧಾಟಿಯಲ್ಲಿ ಬರುತ್ತದೆ. ಆದ್ದರಿಂದ ಇದನ್ನು ತನಿಖೆ ನಡೆಸಲು ಬೇರೆಯವರಿಗೆ ವಹಿಸಬೇಕು.

ಇದನ್ನು ತನಿಖೆ ಮಾಡಲು ಸಿ.ಓ.ಡಿ. ಯವರಿಗೆ ವಹಿಸಬೇಕು. ಮತ್ತು ಇದನ್ನು ತನಿಖೆ ಮಾಡಿ, ಇದರ ಸತ್ಯಾಂಶವನ್ನು ಹೊರಗೆಡವಲು ಎರಡೂ ಸದನಗಳ

ಸದಸ್ಯರನ್ನೊಳಗೊಂಡ ಜಂಟಿ ಸಮಿತಿಯನ್ನು ರಚನೆ ಮಾಡಬೇಕು. ಇಲ್ಲದಿದ್ದರೆ ಈ ಒಂದು ಪ್ರಕರಣವನ್ನು ಮುಚ್ಚಿಯಾಕತಕ್ಕ ಅಪಖ್ಯಾತಿಗೆ ಈಡಾಗುತ್ತೀರಿ. ಈ ಪ್ರಕರಣ ನಿಜವೇ ಸುಳ್ಳೆ ಎನ್ನತಕ್ಕ ಸತ್ಯ ಹೊರಗಡೆಬರಬೇಕಾಗಿದೆ. ಕಣ್ಣಪ್ಪ ಒಂದೊಂದು ಸಲ ಒಂದೊಂದು ರೀತಿಯಲ್ಲಿ ಹೇಳುತ್ತಿದ್ದಾನೆ. ಆದ್ದರಿಂದ ಇದರ ಸತ್ಯಾಂಶ ಹೊರಗಡೆ ಬರಬೇಕಾಗಿರತಕ್ಕದ್ದು ಅತ್ಯಾವಶ್ಯ. ಇಲ್ಲದಿದ್ದರೆ, ನಮ್ಮ ಇಡೀ ಜಿಲ್ಲೆಗೆ, ಆ ತಾಲ್ಲೂಕಿನಲ್ಲಿರತಕ್ಕ ನಮಗೆ, ಯಾವತ್ತೂ ಕೂಡ ಅವಮಾನದಿಂದ ತಲೆತಗ್ಗಿಸಬೇಕಾದ ಪರಿಸ್ಥಿತಿ ಬರುತ್ತದೆ ಆದ್ದರಿಂದ ದಯವಿಟ್ಟು ಈ ಎರಡು ಕೆಲಸಗಳನ್ನು ಸರ್ಕಾರ ಮಾಡಬೇಕೆಂದು ತಮ್ಮ ಮೂಲಕ ಆಗ್ರಪಡಿಸುತ್ತೇನೆ.

+ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಸನ್ಮಾನ್ಯ ಉಪಾಧ್ಯಕ್ಷರೆ, ಈ ಘಟನೆ ನಡೆದಮೇಲೆ ನಮ್ಮ ಎಸ್.ಸಿ. ಮೋರ್ಚಾದ ಕಾರ್ಯದರ್ಶಿಗಳಾದ ಶ್ರೀ ಹನುಮಪ್ಪನವರು ಆ ಸ್ಥಳಕ್ಕೆ ಹೋಗಿಬಂದಿದ್ದಾರೆ. ಮತ್ತು ನಮ್ಮ ಬಿ.ಜೆ.ಪಿ. ರಾಜ್ಯ ಘಟಕದ ಅಧ್ಯಕ್ಷರಾದ ಶ್ರೀ ಈಶ್ವರಪ್ಪನವರು ಸಹ ಅಲ್ಲಿಗೆ ಹೋಗಿ ಬಂದಿದ್ದಾರೆ. ನಾನು ಹೇಳುವುದಕ್ಕಿಷ್ಟಪಡುವುದು ಇಷ್ಟೇ ಇವತ್ತು ಬಹಳ ಸ್ಪಷ್ಟವಾಗಿ ಕೋಲಾರ ಜಿಲ್ಲೆಯ ಹರಟಿ ಗ್ರಾಮದ ಕಣ್ಣಪ್ಪ ಎಂಬ ದಲಿತನ ಮೇಲೆ ಹಲ್ಲೆಯಾಗಿರತಕ್ಕದ್ದು ನಿಜವಾದ ಸಂಗತಿ. ಅವರ ಕೈಯನ್ನು ಕಟ್ಟಿ, ಅವನ ಮೇಲೆ ಬಲವಂತವಾಗಿ ಹೊಡೆದಿರತಕ್ಕದ್ದು ನಿಜವೆಂದು ಅಲ್ಲಿರತಕ್ಕ ಜನರು ಮಾತನಾಡಿಕೊಳ್ಳುತ್ತಿದ್ದಾರೆ. ಆದರೆ ಮಲವನ್ನು ತಿನ್ನಿಸಿದ್ದಾರೆ ಎನ್ನತಕ್ಕ ಮಾತನ್ನು ಸ್ವತಃ ಆ ಜಿಲ್ಲೆಯಿಂದ ಬಂದಿರತಕ್ಕವರ್‍ಯಾರೂ ಹೇಳುತ್ತಿಲ್ಲ. ಆದರೆ ಇರತಕ್ಕ ಪ್ರಶ್ನೆ ಏನೆಂದರೆ ಒಬ್ಬರು ದಲಿತ ಜನಾಂಗದ ವ್ಯಕ್ತಿಯ ಮೇಲೆ ಈ ರೀತಿ ಅಮಾನುಷ ರೀತಿಯಲ್ಲಿ ಹಲ್ಲೆಯಾದಾಗ ಅವನನ್ನು ಕಟ್ಟಿ ಮೈಮೇಲೆ ಹೊಡೆದಿರುವ ಸಂದರ್ಭ ಬಂದಿರತಕ್ಕ ಸಮಯದಲ್ಲಿ, ನನ್ನ ಪ್ರಾಣಕ್ಕೆ ಭಯ ಬಂದಿದೆ ಎನ್ನತಕ್ಕ ಮಾತನ್ನು ಹೇಳುತ್ತಿರುವ ಸಮಯದಲ್ಲಿ, ಆ ವ್ಯಕ್ತಿಯ ಮೇಲೆ ಘಟನೆ ನಡೆದಿದೆ ಎಂದು ಹೇಳಿರತಕ್ಕ ಸಂದರ್ಭದಲ್ಲಿ ಬಹುಶಃ ಆಡಳಿತ ಪಕ್ಷದ ಯಾರೋ ಒಬ್ಬರು ಪ್ರಮುಖರ ಪಾತ್ರ ಅದರಲ್ಲಿದೆ ಎಂದು ಅದನ್ನು ಮುಚ್ಚಿಹಾಕತಕ್ಕ ಅಪಕೀರ್ತಿಗೆ ನೀವು ಗುರಿಯಾಗಬೇಡಿ. ಇದರಲ್ಲಿನ ಸತ್ಯಾಸತ್ಯತೆಯು ಈ ರಾಜ್ಯದ ಜನರಿಗೆ ಗೊತ್ತಾಗಲಿ.

ಇದುವರೆಗೆ ಈ ರೀತಿ ದಲಿತರ ವರ್ಗದವರ ಮೇಲೆ ಅನೇಕ ಹಲ್ಲೆಗಳಾಗಿವೆ. ಅಮಾನುಶ ಘಟನೆಗಳೇನು ನಡೆದಿದೆ ಅದರ ಬಗ್ಗೆ ಯಾವುದೇ ಸರಿಯಾದಂಥ ತನಿಖೆಯಾಗದೆ ಅದನ್ನು ಮುಚ್ಚಿ ಹಾಕತಕ್ಕ ವ್ಯವಸ್ಥೆ ಪ್ರಯತ್ನ ಆಡಳಿತ ಪಕ್ಷದ ತಾವು ಮಾಡಿದರೆ ತಾವು ಅಪಕೀರ್ತಿಗೆ ಗುರಿಯಾಗುತ್ತೀರಿ. ಈಗಲಾದರೂ ನಾನು ಹೇಳುತ್ತಿದ್ದೇನೆ, ಎಲ್ಲಾ ಪಕ್ಷದವರು ಸೇರಿ ಒಂದು ಸದನದ ಸಮಿತಿಯು ಆ ಸ್ಥಳಕ್ಕೆ ಹೋಗಿ ಅಲ್ಲಿನ ಸತ್ಯಾಸತ್ಯತೆಯನ್ನು ನೋಡಿಕೊಂಡು ಬಂದು ತಮಗೆ ವರದಿಯನ್ನು ಕೊಡುತ್ತೇವೆ. ನಿಮಗೆ ನಮ್ಮ ವರದಿಯ ಮೇಲೆ ನಂಬಿಕೆ ಇಲ್ಲವೆ? ಆ ರೀತಿ ತನಿಖೆಗೆ ಒಳಪಡಿಸಿ. ಅನಂತರ ಪೋಲೀಸ್ ಇಲಾಖೆಯ ಅಧಿಕಾರಿಗಳೇನಾದರೂ ಯಾರನ್ನಾದರೂ ಉಳಿಸುವುದಕ್ಕೋಸ್ಕರ ಶಾಮೀಲಾಗಿದ್ದರೆ ಎನ್ನುವುದು ಸರಿಯಾದ ವಿಚಾರಣೆಯಾಗಲಿ. ಅದನ್ನೂ ಕೂಡ ಬೇರೆಯವರ ಮೂಲಕ ಪರಿಶೀಲನೆ ಮಾಡತಕ್ಕ ಅಗತ್ಯತೆ ಸಹ ಬರಬಹುದೆಂದು ಹೇಳುತ್ತೇನೆ. ಅದಕ್ಕಾಗಿ ಸಿ.ಓ.ಡಿ. ತನಿಖೆ ಅಗತ್ಯವಿಲ್ಲ. ಆದ್ದರಿಂದ ಸದನದ ಸಮತಿಯಾಗಬೇಕು, ಅದು ಅಲ್ಲಿಗೆ ಹೋಗಿಬಂದು ಸರ್ಕಾರಕ್ಕೆ ವರದಿಯನ್ನು ಕೊಟ್ಟಮೇಲೆ ಸರಿಯಾದಂಥ ಕ್ರಮವನ್ನು ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಮುಖ್ಯಮಂತ್ರಿಯವರು ಈ ಹಗರಣವನ್ನು ಸರ್ಕಾರದ ವತಿಯಿಂದ ಮುಚ್ಚಿಯಾಕಲು ಪ್ರಯತ್ನ ಮಾಡುತ್ತಾರೆಂದು ಅನಿವಾರ್ಯವಾಗಿ ಹೇಳಲೇ ಬೇಕಾಗುತ್ತದೆ. ಕಣ್ಣಪ್ಪನಿಗೆ ರಕ್ಷಣೆಯನ್ನು ಕೊಡಬೇಕು ಎಂದು ಒತ್ತಾಯ ಮಾಡುತ್ತಿದ್ದೇನೆ. ಆದ್ದರಿಂದ ಇದರ

ಬಗ್ಗೆ ತಕ್ಷಣ ಸದನದ ಸಮಿತಿ ಮಾಡುವುದಕ್ಕೆ ಸದನದ ನಾಯಕರು ಒಪ್ಪಿಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ.

+ಶ್ರೀ ಆರ್.ವಿ. ದೇಶಪಾಂಡೆ (ವಿರೋಧ ಪಕ್ಷದ ನಾಯಕರು) : ಸನ್ಮಾನ್ಯ ಉಪಾಧ್ಯಕ್ಷರೇ, ಈಗಾಗಲೇ ನಮ್ಮ ಪಕ್ಷದ ಉಪನಾಯಕರಾದ ಮಾನ್ಯ ಸಿಂಧ್ಯರವರು ಮತ್ತು ಕೋಲಾರ ಭಾಗದಿಂದ ಬಂದಿರತಕ್ಕ ಮಾನ್ಯ ಬೈರೇಗೌಡರು ಇದರ ಬಗ್ಗೆ ಸಾಕಷ್ಟು ಬೆಳಕನ್ನು ಸದನದಲ್ಲಿ ಚೆಲ್ಲಿದ್ದಾರೆ. ನಾವು ಪಕ್ಷಾತೀತವಾಗಿ ಒಂದು ಮಾತನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಇದು ಒಂದು ಗಂಭೀರವಾದ ಘಟನೆ. ಇದನ್ನು ಬಹಳ ಹಗುರವಾಗಿ ತೆಗೆದುಕೊಂಡು ಸರ್ಕಾರ ಜಾರಿಕೊಳ್ಳಲು ಪ್ರಯತ್ನ ಮಾಡಬಾರದು. ಇಲ್ಲಿ ರಾಜಕೀಯವನ್ನು ಬಳಸುವ ಇಚ್ಛೆ ನನಗಿಲ್ಲ. ಪತ್ರಿಕೆಯಲ್ಲಿ ಈ ಪ್ರಕರಣದಲ್ಲಿ ಕಾಂಗ್ರೆಸ್ ಪಕ್ಷದ ತಾಲ್ಲೂಕು ಅಧ್ಯಕ್ಷರು ಇದರಲ್ಲಿ ಶಾಮೀಲಾಗಿದ್ದಾರೆ ಎಂದು ಬಂದಿರಬಹುದು. ಅದು ಬೇರೆ ಪ್ರಶ್ನೆ. ಯಾವ ಪಕ್ಷದವರಾದರೂ ಸಹ ಇದರಲ್ಲಿ ಶಾಮೀಲಾಗಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಅದನ್ನು ಬಿಟ್ಟು ಬೇರೆ ಪ್ರಶ್ನೆ ಇಲ್ಲಿ ಬರುವುದಿಲ್ಲ. ನಮ್ಮ ಸ್ನೇಹಿತರಾದ ಮಾನ್ಯ ಸಿಂಧ್ಯರವರು ಹೇಳಿದಂತೆ ಇಡೀ ರಾಷ್ಟ್ರದಲ್ಲಿ ಕರ್ನಾಟಕದಲ್ಲಿ ಇಂಥ ಘಟನೆ ನಡೆದಿದೆ ಎಂದು ಎಲ್ಲಾ ಪತ್ರಿಕೆಗಳಲ್ಲಿ ಮುಖಮುಟದಲ್ಲಿ ಬಂದಿದೆ. ಎಲ್ಲಾ ನ್ಯಾಷನಲ್ ಡೈಲಿಗಳಲ್ಲಿಯೂ ಬಂದಿದೆ. ಇಡೀ ರಾಷ್ಟ್ರದಲ್ಲಿ ಕೇವಲ ಕರ್ನಾಟಕ ರಾಜ್ಯದಲ್ಲಿ ಮಾತ್ರವಲ್ಲ ನಾಡಿನ ಜನರಿಗೆ ಅವಮಾನ. ಹಾಗಾದರೆ ಇದರಲ್ಲಿ ಏನು ಸತ್ಯ ಇದೆ ಎನ್ನುವುದನ್ನು ನಾವು ತಿಳಿದುಕೊಳ್ಳಬೇಕಾಗಿದೆ. ಆದರೆ ಕಣ್ಣಪ್ಪನ ಮೇಲಂತು ದೌರ್ಜನ್ಯ ನಡೆದಿದೆ ಎಂಬುದನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ.

ಅದರ ಬಗ್ಗೆ ಯಾವ ಸಂದೇಹವೂ ಇಲ್ಲ. ಅವನನ್ನು ಕಟ್ಟಿದ್ದಾರೆ, ಹೊಡೆದಿದ್ದಾರೆ. ಬೆಳಗಿನ ಜಾವ ಮೂರು ಗಂಟೆಗೆ ಅವನನ್ನು ಆಸ್ಪತ್ರೆಗೆ ಸೇರಿಸಿದ್ದಾರೆ. ಮತ್ತೆ ಮುಂಜಾನೆ 6 ಗಂಟೆಗೆ ಅಲ್ಲಿಂದ ಡಿಸ್ಚಾರ್ಜ್ ಮಾಡಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಇಂಥ ಪರಿಸ್ಥಿತಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ನಾನು ಸ್ವಚ್ಛವಾದ ಆಡಳಿತವನ್ನು ಕೊಡುತ್ತೇನೆ. ದುರ್ಬಲರಿಗೆ, ಹಿಂದುಳಿದ ಜನಾಂಗದವರಿಗೆ ಪರಿಶಿಷ್ಟ ಜಾತಿ ಮತ್ತು ಜನಾಂಗದವರಿಗೆ ಸಂರಕ್ಷಣೆ ಕೊಡುತ್ತೇವೆಂದು ಹೇಳಿದ್ದಾರೆ. ಇವತ್ತು ವಿರೋಧಪಕ್ಷದಿಂದ ಸದನದ ಸಮಿತಿಯಾಗಬೇಕು ಮತ್ತು ಸಿ.ಓ.ಡಿ. ಮುಖಾಂತರ ತನಿಖೆಯಾಗಬೇಕೆಂದು ಹೇಳಿದ್ದೇವೆ. ಅದಕ್ಕೆ ತಾವು ಹಿಂದೆ ಹೋಗಬಾರದು. ಹಾಗೆ ತಾವು ಹೋದರೆ ತಮ್ಮ ಗೌರವಕ್ಕೆ ಚ್ಯುತಿ ಬರಬಹುದು. ಇವತ್ತು ನಾವು ಕೇವಲ ಕೋಲಾರದ ವಿಷಯವನ್ನು ಮಾತನಾಡುವುದಿಲ್ಲ. ರಾಜ್ಯದ ಗುಲ್ಬರ್ಗಾ, ಬೆಳಗಾಂ, ಬೇರೆ ಬೇರೆ ಇರಬಹುದು. ಪ್ರತಿದಿನ ಪತ್ರಿಕೆಗಳಲ್ಲಿ ಸುದ್ದಿ ಇರುತ್ತವೆ. ದುರ್ಬಲ ವರ್ಗದವರ ಮೇಲೆ ಪರಿಶಿಷ್ಟ ಜಾತಿಯವರ ಮೇಲೆ ಅತ್ಯಾಚಾರ, ಅನ್ಯಾಯವಾಗುತ್ತಿದೆ. ಇವತ್ತು ಸರ್ಕಾರ ಪರಿಶಿಷ್ಟ ಜಾತಿಯವರಿಗೆ ರಕ್ಷಣೆ ಕೊಡುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ. ಹಾಗಾಗಿ ಇದರಲ್ಲಿ ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಇವತ್ತು ಇಂಥ ಗಂಭೀರವಾದ ಸಮಸ್ಯೆಯ ಮೂಲಕ ಮಾನ್ಯ ಮುಖ್ಯಮಂತ್ರಿಗಳು ಇದರಲ್ಲಿ ತಮ್ಮ ಪಕ್ಷದವರು ಇನ್ವಾಲ್ವ್ ಆಗಿದ್ದಾರೆ ಎಂಬ ಭಯ ಪಡುವ ಕಾರಣವಿಲ್ಲ.

ಇದರಲ್ಲಿ ನಿಜವಾದ ಕ್ರಮ ತೆಗೆದುಕೊಂಡರೆ ಸತ್ಯ ಹೊರಗೆ ಬಂದರೆ ಅದರಿಂದ ನಿಮಗೂ ಹೆಚ್ಚಿನ ಗೌರವ ಬರಬಹುದು. ಹಾಗಾಗಿ ಇವತ್ತು ದೌರ್ಜನ್ಯ ಏನು ನಡೆದಿದೆ ಇದರ ಬಗ್ಗೆ ಸಂದೇಹವಿಲ್ಲ, ಸಂಶಯವೂ ಇಲ್ಲ. ಅದನ್ನು ತಾವು ಒಪ್ಪಿಕೊಳ್ಳಬೇಕಾಗುತ್ತದೆ. ಇಲ್ಲಿ ನಾವು ಅದು ಶ್ರೀ ವಾಟಾಳ್ ನಾಗರಾಜ್ ಬಿ.ಜೆ.ಪಿ. ಇರಬಹುದು. ರೈತ ಸಂಘವಿರಬಹುದು. ನಾವು ಎಲ್ಲರೂ ಕೂಡ ಒಪ್ಪಿಕೊಳ್ಳಬೇಕಾಗುತ್ತದೆ. ಈ ದೌರ್ಜನ್ಯದ ಬಗ್ಗೆ ಸದನದ ಸಮಿತಿಯನ್ನು ಮಾಡಬೇಕೆಂದು ನಾವು ಹೇಳಿದ್ದೇವೆ. ಸಿ.ಓ.ಡಿ. ಮುಖಾಂತರ ತನಿಖೆ ಮಾಡಿಸಬೇಕೆಂದು ಹೇಳಿದ್ದೇವೆ. ಇದಕ್ಕೆ ಸರ್ಕಾರ ಒಪ್ಪಿಕೊಳ್ಳಬೇಕು. ಇಲ್ಲದಿದ್ದರೆ ಇದರಲ್ಲಿ ಒಂದು ಮಾತು ಸ್ಪಷ್ಟವಾಗುತ್ತದೆ. ತಾವು

ಸತ್ಯವನ್ನು ಹೈಡ್ ಮಾಡುತ್ತಿದ್ದೀರಿ ಎಂದು, ಮತ್ತೆ ತಾವು ಯಾವುದಕ್ಕೂ ಸಹಕರಿಸುತ್ತಿಲ್ಲ ಎಂಬ ದೂರು ಬಂದಿದೆ. ಅದು ನನಗೆ ಗೊತ್ತಿಲ್ಲ. ಒಬ್ಬ ಮಂತ್ರಿಗಳು ಫಾರೆಸ್ಟ್ ಬಂಗ್ಲೋದಲ್ಲಿ ಕುಳಿತು ಅಧಿಕಾರಿಗಳನ್ನು ಕರೆಯಿಸಿ ಇದರ ಬಗ್ಗೆ ತನಿಖೆ ಇದೇ ಪ್ರಕಾರ ಮಾಡಬೇಕು ಎಂದು ಹೇಳಿದ್ದಾರೆ ಎಂಬ ನನಗೆ ದೂರು ಬಂದಿದೆ. ಅಷ್ಟೇ ಅಲ್ಲ the untouchability act is so serious the Circle Inspector has to investigate, not even the Sub-Inspector.

ಈ ಪ್ರಕರಣದಲ್ಲಿ ಯಾರ ಹೆಸರು ಬಂದಿದೆ. ಅದರ ಬದಲು ಬೇರೆ ಸಾಮಾನ್ಯ ಪ್ರಜೆಯ ಹೆಸರು ಬಂದಿದ್ದರೆ ಇಷ್ಟು ಹೊತ್ತಿಗೆ ಅವನನ್ನು ಬಂಧಿಸಿ ಒಳಗೆ ಇಡುತ್ತಿದ್ದರಲ್ಲಾ, ಅದರೆ ಇವತ್ತು ಇಷ್ಟೆಲ್ಲಾ ನಡೆದಿದ್ದರೂ. ಯಾರನ್ನೂ ಅರೆಸ್ಟ್ ಮಾಡಿಲ್ಲ, ಯಾವ ಕ್ರಮವೂ ಇಲ್ಲ, ಏಕೆ ಏನು ಕಾರಣ? ಯಾರ ಹೆಸರು ಪತ್ರಿಕೆಯಲ್ಲಿ ಬಂದಿದೆಯೋ ಅವರು ಇನ್ನೊಸೆಂಟ್ ಇರಬಹುದು. ನನಗೆ ಗೊತ್ತಿಲ್ಲ. ಅವರು ಯಾವ ತಪ್ಪು ಮಾಡಿಲ್ಲ ಎನ್ನಬೇಕಾದರೆ ತನಿಖೆಯಾಗಬೇಕು. ಅದು ಪಕ್ಷದ ದೃಷ್ಟಿಯಿಂದಲೂ ಒಳ್ಳೆಯದು. ಇವತ್ತು ಈ ಒಂದು ಪ್ರಕರಣದಿಂದ ನಿಮ್ಮ ಪಕ್ಷದ ಘನತೆಗೆ ದೊಡ್ಡ ಹೊಡೆತ ಬಿದ್ದಿದೆ. ಆದುದರಿಂದ ನಿಮ್ಮ ಪಕ್ಷದ ಇಮೇಜ್ ಬೆಳೆಯಬೇಕಾದರೆ ತನಿಖೆಗೆ ಒಪ್ಪಿಕೊಳ್ಳಿ ಮತ್ತು ಸದನದ ಸಮಿತಿ ಹೋಗಲಿ, ಸಿ.ಓ.ಡಿ. ತನಿಖೆ ಮಾಡಿಸಿ ಎಂದು ತಮ್ಮ ಮುಖಾಂತರ ಸರ್ಕಾರದ ಮೇಲೆ ಮತ್ತು ಮಾನ್ಯ ಮುಖ್ಯಮಂತ್ರಿಗಳನ್ನು ಒತ್ತಾಯ ಮಾಡುತ್ತಿದ್ದೇನೆ. ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಹಿಂದುಮುಂದು ನೋಡದೆ ತಕ್ಷಣ ಒಪ್ಪಿಕೊಳ್ಳಬೇಕು.

+ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ಈ ಘಟನೆ ಬಗ್ಗೆ ಅತ್ಯಂತ ವೇದನೆಯಾಗುತ್ತದೆ. ಇವತ್ತು ದಲಿತ ಕಣ್ಣಪ್ಪನ ಹೇಳಿಕೆ ಅಕ್ಷರಶಃ ವಿಚಾರಪೂರಕವಾಗಿದೆ. ಇದು ನಡೆದು ಒಂದು ವಾರವಾಗಿದೆ. ಈ ಒಂದು ವಾರದಲ್ಲಿ ಪತ್ರಿಕೆಗಳಲ್ಲಿ ಏನೇ ಬರಲಿ, ಈ ಘಟನೆ ನಡೆದಿರುವುದು ಸರ್ಕಾರದ ಗಮನಕ್ಕೆ ಬರಲಿಲ್ಲವೇ? ಸರ್ಕಾರದ ಗಮನಕ್ಕೆ ಯಾವಾಗ ಬಂತು. ಈ ಒಂದು ವಾರದಲ್ಲಿ ಯಾರ ಮೇಲಾದರೂ ಚಾರ್ಜಶೀಟ್ ಹಾಕಿ ಯಾರನ್ನಾದರೂ ಬಂಧಿಸಿದ್ದೀರಾ, ಇದುವರೆಗೂ ಏನಾದರೋ ನಡೆದಿರಬೇಕಲ್ಲಾ ಆದರೆ ಇದುವರೆಗೂ ಏನು ಕ್ರಮ ತೆಗೆದುಕೊಂಡಿಲ್ಲ. ಇವತ್ತು ಆ ಮನುಷ್ಯ ಏಟಿನಿಂದ ಸತ್ತಿದ್ದರೆ ಇದರ ಪರಿಣಾಮ ಬೇರೆಯಾಗುತ್ತಿತ್ತು. ಆದರೆ ಇವತ್ತು ಅವನು ಸಾಯುವಂಥ ಮಟ್ಟದಲ್ಲಿ ಅವನು ಹೇಳಿರುವಂತಹ ಹೇಳಿಕೆಯನ್ನು ನೋಡಿದರೆ ಅಷ್ಟು ದುರಂತ, ದೌರ್ಜನ್ಯ ಕಣ್ಣಪ್ಪನ ಮೇಲೆ ನಡೆದಿದೆ. ಆದುದರಿಂದ ಸರ್ಕಾರ ಈ ಪರಿಸ್ಥಿತಿಯಲ್ಲಿ ಯಾವುದೇ ಬೇದಭಾವವಿಲ್ಲದೆ ಯಾವುದೇ ಪಕ್ಷಬೇದವಿಲ್ಲದೆ ಪಂಗಡವಿಲ್ಲದೆ ತನಿಖೆಗೆ ವ್ಯವಸ್ಥೆ ಮಾಡಬೇಕು.

ಆದರೆ, ಸರ್ಕಾರ ಸಂಪೂರ್ಣವಾಗಿ ಈ ವಿಚಾರದಲ್ಲಿ ವಿಫಲವಾಗಿದೆ. ಮತ್ತೇ ನಾವೆಲ್ಲರೂ ಒಕ್ಕೊರಲಿನಿಂದ ಹೇಳತಕ್ಕಂತಹ ಒಂದೇ ಒಂದು ಅಭಿಪ್ರಾಯ, ಅದು ಸತ್ಯ ಹೊರಗೆ ಬರಬೇಕಲ್ಲ. ದೌರ್ಜನ್ಯ ಆಗಿರುವುದನ್ನು ಇಲ್ಲ ಎಂದು ಯಾರೂ ಹೇಳುವುದಕ್ಕೆ ಸಾಧ್ಯವಿಲ್ಲ. ಏಟು ಬಿದ್ದಿರುವುದನ್ನು ಯಾರೂ ತಪ್ಪಿಸುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ನಾನು ಇವತ್ತು ಏನು ಹೇಳುತ್ತಿದ್ದೇನೆ ಎಂದರೆ ಬೆಳಗ್ಗೆಯೂ ಸಹ ಮಾನ್ಯ ಮುಖ್ಯಮಂತ್ರಿಯವರನ್ನು ಭೇಟಿ ಮಾಡಿದ್ದೆ ಮತ್ತು ಸಭೆಯ ಅಧ್ಯಕ್ಷರನ್ನು ಭೇಟಿ ಮಾಡಿ ನಾವು ಏನು ಮಾಡಿದ್ದೇವೆಂದರೆ ಈ ಬಗ್ಗೆ ಒಂದು ಸದನದ ಸಮಿತಿಯನ್ನು ಕೂಡಲೇ ಮಾಡಬೇಕು. ಆ ಸಮಿತಿ ತಕ್ಷಣ ಹೋಗಿ ಈ ವರದಿಯನ್ನು ತರಬೇಕು ಎನ್ನತಕ್ಕಂಥಾದ್ದು ನಮ್ಮೆಲ್ಲರ ಒತ್ತಾಯವಾಗಿದೆ. ಅದನ್ನು ತಮ್ಮ ಮೂಲಕ ಈ ಒಂದು ಗಂಭೀರವಾದಂತಹ ಪರಿಸ್ಥಿತಿಯ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೆ ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ.

ಇದುವರೆಗೂ ಸರ್ಕಾರದವರು ಏನೇನು ಕ್ರಮ ಕೈಗೊಂಡಿದ್ದಾರೆ, ಈ ಕೂಡಲೇ ಇದಕ್ಕೆ ಸಂಬಂಧಪಟ್ಟವರು ಯಾರು ಇರುತ್ತಾರೆ ಅವರನ್ನು ಬಂಧಿಸಬೇಕಾಗಿತ್ತು, ಆದರೆ ಇದುವರೆಗೂ ಯಾರನ್ನೂ ಬಂಧಿಸಿಲ್ಲ, ಯಾರ ಮೇಲೂ ಕೇಸ್ ದಾಖಲಾಗಿದೆ ಎಂದು ನಾನಂತೂ ಅಂದು ಕೊಂಡಿಲ್ಲ. ಈ ಪರಿಸ್ಥಿತಿ ಇರುವಾಗ ಸರ್ಕಾರದ ಒಂದು ಬೇಜವಾಬ್ದಾರಿತ ನಾನೂ ಸಹ ಇದರಲ್ಲಿ ಬರುತ್ತದೆ. ಆದುದರಿಂದ ದಯಮಾಡಿ ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ. ದಯವಿಟ್ಟು ಈ ಕೂಡಲೇ ಈ ಕ್ಷಣದಲ್ಲೇ ಈ ಸದನದಲ್ಲೇ ಸಮಿತಿಯನ್ನು ಅವರು ಪ್ರಕಟಣೆ ಮಾಡಬೇಕು. ಆ ಸಮಿತಿ ನಾಳೆಯೇ ಆ ಸಂಬಂಧಪಟ್ಟ ಹರಟಿ ಗ್ರಾಮಕ್ಕೆ ಹೋಗಬೇಕು ಎನ್ನತಕ್ಕಂತಹ ಮಾತನ್ನು ನಾನು ತಮ್ಮ ಮುಂದೆ ಒತ್ತಾಯ ಮಾಡಿ ಹೇಳುತ್ತಿದ್ದೇನೆ.

+ ಶ್ರೀ ಎ. ನಾಗರಾಜು (ಮಾಲೂರು) : ಸನ್ಮಾನ್ಯ ಅಧ್ಯಕ್ಷರೇ, 26ನೇ ತಾರೀಖು, ಹರಟಿ ಗ್ರಾಮದಲ್ಲಿ ಏನು ಕಣ್ಣಪ್ಪನ ಮೇಲೆ ದೌರ್ಜನ್ಯ ನಡೆದಿದೆ ಮತ್ತು ಮಲ ತಿನ್ನಿಸುವಂತಹ ಆರೋಪವನ್ನು ಕೋಲಾರ ತಾಲ್ಲೂಕು ಕಾಂಗ್ರೆ ಅಧ್ಯಕ್ಷರಾದಂತಹ ವೆಂಕಟರಾಮೇಗೌಡರ ಮೇಲೆ ಮಾಡಿದ್ದಾರೆ, ಅದು ನಿಜವಾಗಲೂ ಬಹಳ ಸತ್ಯಕ್ಕೆ ದೂರವಾದುದು. ಮತ್ತು ಇದರ ಹಿಂದೆ ಬಹಳಷ್ಟು ರಾಜಕಾರಣದ ಕುಚೋದ್ಯ ಇದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ತಮಗೆ ನಾನು ಒಂದು ವಿಚಾರ ಹೇಳುವುದಕ್ಕೆ ಇಷ್ಟ ಪಡುತ್ತೇನೆ. ನಾನು ಕೋಲಾರ ಜಿಲ್ಲೆಯಲ್ಲಿ 1980ನೇ ಇಸವಿಯಿಂದ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷನಾಗಿ ಕೆಲಸ ಮಾಡುತ್ತಿದ್ದೇನೆ. ಕಾಂಗ್ರೆಸ್ ಪಕ್ಷದ ಸಿದ್ದಾಂತ ಏನು ಇದೆ, ಈ ಹಿಂದುಳಿದ ವರ್ಗದವರು ಮತ್ತು ಪರಿಶಿಷ್ಟ ಜಾತಿ ಮತ್ತು ಆರ್ಥಿಕವಾಗಿ ತುಳಿತಕ್ಕೆ ಯಾರು ಸಮಾಜದಲ್ಲಿ ಬಲಿಯಾಗಿದ್ದಾರೆ ಅವರ ಒಂದು ಶ್ರೇಯಸ್ಸಿಗೋಸ್ಕರ ಅವರ ಒಂದು ಮೇಲ್ದರ್ಜೆಗೋಸ್ಕರ ನಾವು ಅಲ್ಲಿ ರಾತ್ರಿ ಹಗಲು ಕೆಲಸ ಮಾಡಿ, ಹೋದ 89ನೇ ಚುನಾವಣೆಯಲ್ಲಿ ನಿರ್ದಿಷ್ಟವಾಗಿ ನಾವು ಅಲ್ಲಿ 9 ಜನ ಶಾಸಕರು ಆರಿಸಿ ಬಂದಿದ್ದೇವೆ. ಮತ್ತು ಎರಡು ಪಾರ್ಲಿಮೆಂಟ್ ಸೀಟ್ನೂ ಸಹ ನಾವು ಅಲ್ಲಿ ಗೆದ್ದಿದ್ದೇವೆ. ಅದಕ್ಕೆ ಪೂರಕವಾಗಿ ಮೊನ್ನೆ ನಡೆದ ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಒಂದೆರಡು ಕ್ಷೇತ್ರದಲ್ಲಿ ಬಿಟ್ಟರೆ ನಮ್ಮ ಬೆಂಬಲಿತ ಅಭ್ಯರ್ಥಿಗಳು ಎಲ್ಲಾ ಕ್ಷೇತ್ರದಲ್ಲಿ ಮೆಜಾರಿಟಿಯಲ್ಲಿ ಗೆದ್ದು ಬಂದಿದ್ದಾರೆ. ಆ ಒಂದು ದಿಸೆಯಲ್ಲಿ ವೆಂಕಟರಾಮೇಗೌಡರ ಮೇಲೆ ಸುಳ್ಳು ಆರೋಪ ಮಾಡಿದ್ದಾರೆ. ನಿಜವಾಗಿಯೂ ಇದು ರಾಜಕೀಯ ಪಿತೂರಿಯಾಗಿರತಕ್ಕಂಥಾದ್ದು, ಕುತಂತ್ರವಾಗಿರತಕ್ಕಂಥಾದ್ದು ಮತ್ತು ಆ ಹಿನ್ನೆಲೆಯಲ್ಲಿ, ಕಣ್ಣಪ್ಪ ಕುಡಿದು ಬಂದು ಹರಟಿ ಗ್ರಾಮದಲ್ಲಿ ವೆಂಕಟರಾಮೇಗೌಡರನ್ನು ಮತ್ತು ಅಲ್ಲಿನ ಜನರನ್ನು ಹೀನಾಮಾನವಾಗಿ ಬಯ್ಯುತ್ತಿರುವಾಗ ಅಲ್ಲಿನ ಗ್ರಾಮಸ್ಥರು ಅವನನ್ನು ಹಿಡಿದು ನಿಶೆ ಇಳಿಸುವುದಕ್ಕೆ ಮಜ್ಜಿಗೆ ಕುಡಿಸಿದ್ದಾರೆ ಹೊರತಾಗಿ ಮಲ ತಿನ್ನಿಸಲಿಲ್ಲ ಎಂದು ಹೇಳುತ್ತೇನೆ.

ಆ ದಿಸೆಯಲ್ಲಿ ನಾನು ಅಂದು ಕೋಲಾರ ಜಿಲ್ಲೆಯ ಎಸ್ಪಿಯವರನ್ನು ಕಂಡು ಈ ಹರಿಜನರ ಮೇಲೆ ಯಾರೇ ದೌರ್ಜನ್ಯ ಮಾಡಿರಲಿ ತಾವು ಇದನ್ನು ಸರ್ಕಲ್ ಇನ್ಸ್‌ಪೆಕ್ಟರ್‌ಗಳಾಗಲಿ ಅಥವಾ ಸಬ್‌ಇನ್ಸ್‌ಪೆಕ್ಟರ್‌ಗಳಾಗಲಿ ವಹಿಸಬಾರದು, ತಾವೇ ಖುದ್ದಾಗಿ ಹೋಗಬೇಕು ಎಂದು ಅರಿಕೆ ಮಾಡಿಕೊಂಡೆ. ಅವರು ಕೂಡಲೇ ಹೋಗಿ ಅಲ್ಲಿ ವಿಚಾರಣೆ ಮಾಡಿ ಮತ್ತು ಪೋಲೀಸ್ ಠಾಣೆಗೆ ಸುಮಾರು 30-35 ಮಂದಿಯನ್ನು ಮಧ್ಯಾಹ್ನ ಒಂದು ಗಂಟೆಗೆ ಕರೆದುಕೊಂಡು ಬಂದು 8 ಗಂಟೆಯವರೆಗೆ ವಿಚಾರಣೆ ಮಾಡಿದ್ದಾರೆ. ಅವರ ಒಂದು ವರದಿ ಆಧಾರದ ಮೇಲೆ ಈ ವಿಚಾರಣೆ ಏನು ನಡೆದಿದೆ, ಇದು ಸತ್ಯಕ್ಕೆ ದೂರವಾದುದು. ಯಾರೂ ಕಣ್ಣಪ್ಪನ ಮೇಲೆ ದೌರ್ಜನ್ಯ ಮಾಡಲಿಲ್ಲ, ಮಲ ತಿನ್ನಿಸಲಿಲ್ಲ ಎಂದು ತನಿಖೆಯ ಸತ್ಯಾಂಶ ಹೊರಬಂದಿದೆ. ಅದು ಏನೇ ಆಗಲಿ ಇವತ್ತು ಈ ಕಾಂಗ್ರೆಸ್ ಪಕ್ಷದ ಮೇಲೆ ಏನು ಒಂದು ಆರೋಪ

ಇದೆ ಇದರಿಂದ ಹೊರಗೆ ಬರಬೇಕಾಗಿರುವುದರಿಂದ ನಾನೂ ಕೂಡ ಸದನದ ಸಮಿತಿಯನ್ನು ಮಾಡಲಿ ಎಂದು ಮಾನ್ಯ ಮುಖ್ಯಮಂತ್ರಿಗಳನ್ನು ಒತ್ತಾಯ ಮಾಡುತ್ತೇನೆ. ಈ ದಿಸೆಯಲ್ಲಿ ಸದನದ ಸಮಿತಿ ಹೋಗಿ ಸತ್ಯಾಂಶವನ್ನು ಹೊರತೆಗೆದು ಏನು ನಡೆದಿದೆ ಎನ್ನುವುದನ್ನು ಜನತೆಗೆ ನಾವು ಸಾಬೀತು ಮಾಡಬೇಕಾಗಿದೆ ಮತ್ತು ಅಲ್ಲಿನ ಎಸ್ಪಿಯವರು ಏನು ಇದ್ದಾರೆ ನಾಯಕ್ರವರು ಬಹಳ ಸಮಂಜಸವಾದ ಮತ್ತು ಸಂಯೋಜಿತವಾದ ಒಂದು ಆಕ್ಷನ್ ತೆಗೆದುಕೊಂಡು ಅಲ್ಲಿ ಮುಂದೆ ಈ ರಾಜಕಾರಣದ ಕುತಂತ್ರ ನಡೆಯದ ಹಾಗೆ ತನಿಖೆ ನಡೆಸಿದ್ದಾರೆ. ಆದುದರಿಂದ ಈ ಸತ್ಯಾಂಶ ಏನು ಇದೆ ಅದು ಹೊರಗೆ ಬರುವುದಕ್ಕೆ ಮಾನ್ಯ ಮುಖ್ಯಮಂತ್ರಿಯವರು ಸದನದ ಸಮಿತಿಯನ್ನು ಮಾಡಬೇಕು ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೇ, ಇವತ್ತು ಮಾನ್ಯ ವಿರೋಧಪಕ್ಷದ ಉಪ ನಾಯಕರಾದ ಮಾನ್ಯ ಸಿಂಧ್ಯರವರು, ಬೈರೇಗೌಡರು, ಯಡಿಯೂರಪ್ಪನವರು, ದೇಶಪಾಂಡೆಯವರು ಮತ್ತು ಮಾನ್ಯ ವಾಟಾಳ್ ನಾಗರಾಜ್ರವರು ಎತ್ತಿದಂಥ ವಿಚಾರ ಬಹಳ ಗಂಭೀರವಾದುದು. ಇದನ್ನು ಲಘುವಾಗಿ ತೆಗೆದುಕೊಳ್ಳತಕ್ಕ ಅಪೇಕ್ಷೆ ನಮ್ಮ ಸರ್ಕಾರಕ್ಕಿಲ್ಲ. ಏಕೆಂದರೆ ಈ ಆಪಾದನೆ ಬಹಳ ಗಂಭೀರವಾಗಿದೆ ಎಂದು ಹೇಳಿದಮೇಲೆ ಇದನ್ನು ಗಂಭೀರವಾಗಿಯೇ ಪರಿಶೀಲನೆ ಮಾಡತಕ್ಕದ್ದು ಇಲ್ಲಿ ಇರತಕ್ಕ ಸರ್ಕಾರದ ಕರ್ತವ್ಯವಾಗಿರುತ್ತದೆ. ಆದುದರಿಂದ ನಾವು ಖಂಡಿತವಾಗಿ ಇದನ್ನು ಲಘುವಾಗಿ ತೆಗೆದುಕೊಳ್ಳುವುದಿಲ್ಲವೆಂದು ಹೇಳುವುದಕ್ಕೆ ಅಪೇಕ್ಷೆಪಡುತ್ತೇನೆ. ಈ ಪ್ರಕರಣದ ಬಗ್ಗೆ ಹೇಳುವುದಾದರೆ, ಇದನ್ನು ಯಾರೇ ಮಾಡಿದ್ದರೂ, ಪ್ರಕರಣ ಸತ್ಯವಾಗಿದ್ದರೆ ಅವರ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳುವುದಕ್ಕೆ ನಾವು ಹಿಂದುಮುಂದು ನೋಡುವುದಿಲ್ಲ. ಅಲ್ಲದೆ ಇದನ್ನು ಮುಚ್ಚಿಡತಕ್ಕ ಅವಶ್ಯಕತೆ ಕೂಡ ನಮಗಿಲ್ಲ. ಯಾರನ್ನೂ ರಕ್ಷಣೆ ಮಾಡಬೇಕೆಂದಿಲ್ಲ. ಇದನ್ನು ಮುಚ್ಚಿಟ್ಟರೆ ಈ ಪಾಪ ನಮ್ಮ ಮೇಲೆ ಬರುತ್ತದೆ. ಈ ಪಾಪದ ಹೊರೆಯನ್ನು ನಾವು ಹೊರುವುದಕ್ಕೆ ತಯಾರಿಲ್ಲ. ಮುಖ್ಯ ಮಂತ್ರಿಯಾಗಿ ನಾವೂ ಕೂಡ ತಯಾರಿಲ್ಲ. ಅದೇ ರೀತಿ ಸರ್ಕಾರ ಕೂಡ ತಯಾರಿಲ್ಲ. ಇವತ್ತು ಸರ್ಕಾರ ಇದರ ಬಗ್ಗೆ ಏನೂ ಕ್ರಮ ತೆಗೆದುಕೊಂಡಿಲ್ಲ. ನೀವು ಇಷ್ಟು ದಿವಸವಾದರೂ ಏತಕ್ಕೆ ಸುಮ್ಮನಿದ್ದೀರೆಂದು ಪ್ರಸ್ತಾಪ ಮಾಡಿದ್ದೀರಿ. ಬಹುಶಃ ನಿಮಗೆ ಸರಿಯಾದ ಮಾಹಿತಿ ದೊರೆತಿಲ್ಲವೆಂದು ಹೇಳಬಯಸುತ್ತೇನೆ. ಏಕೆಂದರೆ ಸರಿಯಾದ ಮಾಹಿತಿ ದೊರೆತಿದ್ದಿದ್ದರೆ ನೀವು ಈ ರೀತಿ ಆಪಾದನೆ ಮಾಡುತ್ತಿರಲಿಲ್ಲ. ಇದನ್ನು ಎಸ್.ಪಿ.ಯವರೇ ಸ್ವತಃ ತನಿಖೆ ಮಾಡಿದ್ದಾರೆ. ನಾವು ಆ ವರದಿಯನ್ನು ತರಿಸಿದ್ದೇವೆ. ಇದರಲ್ಲಿ ಯಾವುದೇ ಗುಟ್ಟೂ ಇಲ್ಲ. ಈ ವರದಿಯನ್ನು ತಮ್ಮ ಅವಗಾಹನೆಗೆ ತರುವುದಕ್ಕೆ ಅಪೇಕ್ಷೆ ಪಡುತ್ತೇನೆ. ಎಸ್.ಪಿ.ಯಿಂದ ಬಂದಿರತಕ್ಕ ವರದಿಯನ್ನು ಬೇಕಾದರೆ ತಾವು ಪರಿಶೀಲಿಸಬಹುದು.

ಶ್ರೀ ಸಿ. ಬೈರೇಗೌಡ : ಆ ವರದಿಯನ್ನು ಟೇಬಲ್ ಮೇಲಿಡಿ.

ಶ್ರೀ ಎಂ. ವೀರಪ್ಪ ಮೊಯಿಲಿ : ತಮಗೂ ಪ್ರತಿಯನ್ನು ಕಳುಹಿಸಿಕೊಡುತ್ತೇನೆ, ಮತ್ತು ಟೇಬಲ್ ಮೇಲೂ ಇಡುತ್ತೇನೆ. ಇದರಲ್ಲಿ ಯಾವುದೇ ಗುಟ್ಟೂ ಇಲ್ಲ, ಯಾವುದನ್ನೂ ಮುಚ್ಚಿಡುವ ಅವಶ್ಯಕತೆ ಇಲ್ಲ, ನಾವು ಯಾವಾಗ ಇದನ್ನು ಮುಚ್ಚಿಡಬೇಕಾದ ಅವಶ್ಯಕತೆ ಇಲ್ಲವೆಂದು ಹೇಳುತ್ತಿರುವುದರಿಂದ ಯಾವುದೇ ವಿಷಯವನ್ನೂ ಸಪ್ರೆಸ್ ಮಾಡುವಂಥ ಅವಶ್ಯಕತೆ ಇಲ್ಲ, ನಾವು ಇಷ್ಟಕ್ಕೇ ನಿಲ್ಲಿಸಲಿಲ್ಲ. ಎಸ್.ಪಿ.ಯವರ ವರದಿ ಒಂದು ಕಡೆಯಾದರೆ, ಇನ್ನೊಂದು ಕಡೆ ಡಿ.ಐ.ಜಿ.ಯವರನ್ನು ನಾವು ಅಲ್ಲಿಗೆ ಕಳುಹಿಸಿದ್ದೇವೆ. ಮಾನ್ಯ ಮರಿಸ್ವಾಮಿಯವರು ಪರಿಶಿಷ್ಟ ಜನಾಂಗಕ್ಕೆ ಸೇರಿದವರಾಗಿದ್ದಾರೆ. ಅವರೇ ಸ್ವತಃ ಅಲ್ಲಿ ಹೋಗಿ ನೋಡಿದ್ದಾರೆ. ಡಿ.ಜಿ.ಪಿ.ಯವರಿಗೆ ಕೊಟ್ಟ ವರದಿಯಂತೆ ಘಟನೆ ನಡೆದಿರುವುದು ಸರಿಯಲ್ಲವೆಂದು ಅವರು ಇರತಕ್ಕ ವಿಷಯವನ್ನು ಹೇಳುತ್ತಿದ್ದಾರೆ.

ಅನಂತರ ಬೇಕಾದರೆ ತಾವು ಇದರ ಬಗ್ಗೆ ಚರ್ಚೆ ಮಾಡಿ. ಎಸ್.ಪಿ.ಯವರೂ ಕೂಡ ಘಟನೆ ನಡೆದ ಸತ್ಯಾಂಶದ ಬಗ್ಗೆ ಏನು ಹೇಳಲಾಗಿದೆ. That version is not substantiated by the report which is sent by the S.P., and further for a cross-check, ನಾವು ಡಿ.ಐ.ಜಿ.ಯವರನ್ನು ಕಳುಹಿಸಿದ್ದೇವೆ. ಅವರೂ ಕೂಡ he has given a report and he has observed that there is no substance in tha allegation made in this case. That report has also come. ಮಾನ್ಯ ಮರಿಸ್ವಾಮಿಯವರು ಪರಿಶಿಷ್ಟ ಜನಾಂಗಕ್ಕೆ ಸೇರಿದವರು. ಇದೆಲ್ಲದರ ಮೇಲೆ ನಾವು ಸಿ.ಆರ್.ಇ. ಸೆಲ್ನ ಒಬ್ಬ ಎಸ್.ಪಿ.ಯವರನ್ನೇ ಕಳುಹಿಸಿದ್ದೇವೆ. ಅವರೂ ಕೂಡ ಇನ್ವೆಸ್ಟಿಗೇಷನ್ಗೆ ಹೋಗಿದ್ದಾರೆ.

ಆ ವರದಿ ಕೂಡ ನಮಗೆ ಸದ್ಯದಲ್ಲಿಯೇ ಬರುತ್ತದೆ. ಅದನ್ನೂ ಕೂಡ ತಮ್ಮ ಗಮನಕ್ಕೆ ತರುವುದರಲ್ಲಿ ನನ್ನ ಏನೂ ಅಡ್ಡಿ ಇಲ್ಲ. I am not going to hide any report or suppress any report. That report of the S.P, I am prepared to send you the copy. The report of the D.I.G, I am prepared to send the copy. The report of the SP of the CRE Cell, I am prepared to send the copy.

ಅಡಗಿಸತಕ್ಕ ಅಥವಾ ನಮಗೆ ಅನುಕೂಲವಾಗತಕ್ಕ ವರದಿ ಕೊಡಬೇಕೆಂದು ಸೂಚನೆ ಕೊಟ್ಟಿದ್ದು ಎಲ್ಲಿಯಾದರೂ ಎವಿಡೆನ್ಸ್ ನಿಮಗೆ ಬಂದಿದ್ದರೆ ಹಾಗೂ ನಮಗೆ ತೋರಿಸಿಕೊಟ್ಟಿದ್ದೇ ಆದರೆ I am not prepared to sit on this side.

ಏಕೆಂದರೆ ಯಾವುದಾದರೂ ಆಪಾದನೆ ಮಾಡುವಾಗ ಯಾವುದಾದರೂ ಸತ್ಯಾಂಶ ಇರಬೇಕಾಗುತ್ತದೆ. ಆದರೆ ಮುಚ್ಚುವುದಕ್ಕೆ ನಾವು ಪ್ರಯತ್ನಪಡುತ್ತಿದ್ದೇವೆ ಅಥವಾ ಮುಖ್ಯಮಂತ್ರಿಗಳು ಏನಾದರೂ ಇದಕ್ಕೆ ಕೈಹಾಕಿದ್ದಾರೆಯೇ ಏತಕ್ಕೆಂದರೆ ಒಂದು ಪತ್ರಿಕೆಯಲ್ಲಿ ಬರೆದಿದ್ದಾರೆ. ಸ್ಟೇಟ್ಸ್‌ಮನ್ ಪತ್ರಿಕೆಯಲ್ಲಿ ಬಂದಿದೆ. ಬಹುಶಃ ಸರಿಯಾದ ಮಾಹಿತಿ ಇಲ್ಲದೇ ಬರೆದಿರಬೇಕು. Sometimes sensationalism will suppress the truth ಸರಿಯಾಗಿ ನೋಡಬಹುದಿತ್ತು. ತಮಗೆ ಗೊತ್ತಿದೆ. ಇವತ್ತು ಇದೇ ಸದನದ ಸಮಿತಿ ಕುಷ್ಟಗಿ ಪ್ರಕರಣದ ಬಗ್ಗೆ ಹೋಗಿ ನೋಡಿ ಬಂತು. ಇಲ್ಲಿ ತಾವು ಚರ್ಚೆ ಮಾಡಿದ ಪ್ರೊಸೀಡಿಂಗ್ಸ್ ಇದೆ. ಎಂತಹ ಆಪಾದನೆಗಳು, ಸುರಿಮಳೆ ಬಂತು. On the spot we suspended the Officer. We have sent the COD for enquiry. I have sent Revanasiddaiah, IGP, COD.

ರೇವಣಸಿದ್ಧಯ್ಯನವರು ಐಜಿಪಿಐ (ಸಿಓಡಿ) ಆಗಿದ್ದರು. ಅವರೇ ಹೋಗಿ ನೋಡಿ ಬರಲು ಹೇಳಿದೆ. ನಾನೂ ಹೋಗಿ ನೋಡಿದೆ. ಶರಣವ್ವಳ ತಾಯಿ ಮತ್ತು ಸೋದರ ಮಾವನ ಜೊತೆ ಮಾತನಾಡಿದೆವು. ಅವರು ಕೇಳಿದು ಮಾತು ಏನು ಗೊತ್ತೇ? ಖರ್ಗೆಯವರೂ ಇದ್ದರು. ಏನು ಹರಿಜನ ಕುಲಕ್ಕೆ ಸೇರಿದವರು ಎಂದು ನಿಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳಲಿಕ್ಕೆ ನಮ್ಮ ಹೆಸರಿನಲ್ಲಿ. ಏನೇನೋ ಅವಳು ಸತ್ತು ಹೋದಳು. ಸತ್ತವಳ ಮೇಲೆ ಆಪಾದನೆ ಮಾಡುವ ಹೀನ ಕೃತ್ಯಕ್ಕೆ ಇಳಿಯುತ್ತೀರಲ್ಲಾ ಎಂದು ಇಡೀ ಸಮಾಜವನ್ನು ಆಕೆಯ ತಾಯಿ ದೂರಿದಳು. ನಮ್ಮ ಹೆಸರು ಉಪಯೋಗ ಮಾಡಿಕೊಂಡು ನೀವು ರಾಜಕೀಯ ಮಾಡುತ್ತಿದ್ದೀರಿ, ಅಂತಹ ಒಂದು ಸ್ಥಿತಿ ಇವತ್ತು ಆಗುತ್ತಾ ಇದೆ ಎಂದರು. ಸಿಂಧ್ಯಾ ಅವರೂ ಹೇಳಿದರು. ನಮಗೆ ವರದಿ ಬಂದಮೇಲೆ ನಾವು ಮಾಡುತ್ತೇವೆ. ಆದರೆ on the spot, ಏನು ಆಗುತ್ತದೆ ಅಲ್ಲಿ ground realities? This is available. We are using it as a commodity to subserve our interests. I think that should be halted.

ಇದು ನಿಜ ಸಂಗತಿ ಇದ್ದರೆ ಯಾರು ತಪ್ಪಿತಸ್ಥರು ಇದ್ದಾರೆ ಅವರನ್ನು ಗಲ್ಲಿಗೆ ಏರಿಸೋಣ. If possible, move an amendment to hang such people who are taking this for riding over.

ಆದರೆ ಅವರನ್ನು ಕಮಾಡಿಟಿಯಾಗಿ ಉಪಯೋಗ ಮಾಡಿಕೊಂಡು ಅಸತ್ಯದ ಒಂದು ಸೌಧವನ್ನೇ ಕಟ್ಟಿಕೊಂಡು ಸತ್ಯವನ್ನು ಸಮಾಧಿ ಮಾಡಿಕೊಂಡು ಇಂತಹ ಒಂದು ಜನಾಂಗವನ್ನು ನಾವು as a cattle we use as scapegoat as and when it is convenient to us. That is also equally a heinous crime. Because, ಆ ಸಮಾಜದ ಮೇಲೆ ರಿಫ್ಲೆಕ್ಷನ್ ಆಗುತ್ತದೆ. Sharanavva was suffering for six months with a deadly disease. ಅವರು ಅತ್ಯಾಚಾರ ಮಾಡಿದರು ಎಂದರೆ, ಒಬ್ಬಳು ಹುಡುಗಿ ಅಲ್ಲಿ ಕುಷ್ಟಗಿಯಲ್ಲಿ She wanted to reform the society. ಸತ್ತಮೇಲೆ ಕೂಡ ಆ ಹುಡುಗಿ ಆಪಾದನೆಯಿಂದ ತಪ್ಪಿಸುವುದಕ್ಕಾಗಲಿಲ್ಲ. ಇದು ನಮ್ಮ ಸಮಾಜ. ನಾನು ಯಾರನ್ನೂ ದೂರುವುದಿಲ್ಲ. ಏನು ವರದಿ ಬಂತು? It is relevant because atleast. ಇದರಿಂದ ನಾವು ಎಚ್ಚರಿಕೆ ಪಡಬೇಕಾಗಿತ್ತು. ಕುಷ್ಟಗಿ ಪ್ರಕರಣ, ಶರಣವ್ವಳ ಪ್ರಕರಣ ನಮಗೆ ಎಚ್ಚರಿಕೆಯಾಗಿ, ನಾವು ಗಮನದಲ್ಲಿ ಇಟ್ಟುಕೊಳ್ಳಬೇಕಾಗಿತ್ತು. ಆ ವರದಿಯಲ್ಲಿ ಈ ಕೆಳಕಂಡಂತೆ ಸಮಿತಿ ಅಭಿಪ್ರಾಯ ಪಟ್ಟಿದೆ. ಸಮಿತಿಯ ಅನಿಸಿಕೆಗಳು ಈ ರೀತಿ ಇದೆ.

1) ದಿನಾಂಕ 10.2.1993ರಂದು ನಡೆಯಿತೆನ್ನಲಾದ ಕುಮಾರಿ ಶರಣವ್ವಳ ಮೇಲಿನ ಸಾಮಾಹಿಕ ಅತ್ಯಾಚಾರದ ಆರೋಪ ನಿಜವಲ್ಲವೆಂಬುದು ಸಮಿತಿಯ ವಿಚಾರಣೆಯಿಂದ ಕಂಡುಬರುತ್ತದೆ.

* * *

6) ಈ ಪ್ರಕರಣದ ಸತ್ಯಾಸತ್ಯತೆಯನ್ನು ಪರಿಶೀಲಿಸಿದಾಗ, ಪ್ರಜಾವಾಣಿ ಹಾಗೂ ಸಂಯುಕ್ತ ಕರ್ನಾಟಕ ಪತ್ರಿಕೆಗಳವರು ಈ ಘಟನೆಗೆ ಸಂಬಂಧಿಸಿದಂತೆ ಪ್ರಚಾರ ನೀಡಿದ್ದು, ಇಂತಹ ಅತಿ ಸೂಕ್ಷ್ಮವಾದ ವಿಷಯಗಳನ್ನು ಪ್ರಕಟಿಸುವ ಮುನ್ನ ವಿಷಯದ ಸತ್ಯಾಸತ್ಯತೆಯನ್ನು ಜಾಗರೂಕತೆಯಿಂದ ಪರಿಶೀಲಿಸದಿಲ್ಲದಿರುವುದು ಸಮಿತಿಯ ಗಮನಕ್ಕೆ ಬಂದಿದೆ. ಈ ಪತ್ರಿಕೆಗಳು ಈ ವಿಷಯದ ಸತ್ಯಾಸತ್ಯತೆಯನ್ನು ಜಾಗರೂಕತೆಯಿಂದ ಪರೀಕ್ಷಿಸಿ, ಪರಿಶೀಲಿಸಿ ಪ್ರಕಟಿಸಿದ್ದಲ್ಲಿ ಇಂತಹ ಗೊಂದಲಕ್ಕೆ ಎಡೆಯುಂಟಾಗುತ್ತಿರಲಿಲ್ಲ. ಪತ್ರಿಕಾ ಪ್ರತಿನಿಧಿಗಳು ವಿಷಯದ ಗಾಂಭೀರ್ಯತೆಯನ್ನು ಆಳವಾಗಿ ಹಾಗೂ ಕೂಲಂಕುಷವಾಗಿ ಪರಿಶೀಲಿಸದೆ ಅವರವರ ಪತ್ರಿಕೆಗಳಲ್ಲಿ ಪ್ರಕಟಿಸಿದ್ದರಿಂದ ಗೊಂದಲಮಯ ವಾತಾವರಣವಾಯಿತಲ್ಲದೆ, ಕೋಮು ವೈಷಮ್ಯವನ್ನು ಉದ್ರೇಕಗೊಳಿಸಲು ಈ ಪತ್ರಿಕೆಗಳು ಕಾರಣವಾಯಿತೆಂದು ಸಮಿತಿಯು ಭಾವಿಸುತ್ತದೆ. ಈ ಪತ್ರಿಕೆಗಳು ಸುದ್ದಿ ಮೂಲಗಳ ಸತ್ಯಾಸತ್ಯತೆಯನ್ನು ಸರಿಯಾಗಿ ಶೋಧಿಸದೆ ಕೇವಲ ವದಂತಿಗಳ ಆಧಾರದ ಮೇಲೆ ವರದಿಗಳನ್ನು ಪ್ರಕಟಿಸಿದ್ದಕ್ಕೆ ಸಮಿತಿಯು ತನ್ನ ಅಸಮಾಧಾನವನ್ನು ವ್ಯಕ್ತಪಡಿಸುತ್ತದೆ. ಪ್ರಜಾಪ್ರಭುತ್ವದಲ್ಲಿ ಪತ್ರಿಕಾ ಮಾಧ್ಯಮಗಳ ಕರ್ತವ್ಯ ಹಾಗೂ ನಿರ್ವಹಣೆ ಸಾಮಾಜಿಕ ಹೊಣೆಗಾರಿಕೆಯನ್ನು ಒಳಗೊಂಡಿರಬೇಕಲ್ಲದೆ, ಅವರ ಕಾರ್ಯನಿರ್ವಹಣೆಯು ಸಾರ್ವಜನಿಕ ಜನಜೀವನಕ್ಕೆ ಸಹಾಯಕವಾಗಬೇಕೇ ಹೊರತು ಮಾರಕವಾಗಬಾರದು.

7) ಆರೋಪವನ್ನು ಮಾಡಿದ ನಂತರ ಆರೋಪವನ್ನು ಸಾಬೀತು ಮಾಡುವಂತಹ ಪುರಾವೆಗಳು ಬೇಕು. ಆದರೆ, ಪತ್ರಿಕೆಯವರು ಹಾಗೂ ಇತರರು ಈ ಪುರಾವೆಗಳನ್ನು ಸಮಿತಿಗೆ ಒದಗಿಸಲು ವಿಫಲರಾಗಿರುತ್ತಾರೆ. ಅಲ್ಲದೆ ಪುರಾವೆಗಳನ್ನು ಒದಗಿಸಲು ನಿರಾಕರಿಸಿರುತ್ತಾರೆ.

ಕುಷ್ಟಗಿ ಪ್ರಕರಣ ಇವತ್ತು ನಮ್ಮ ಕಣ್ಣ ಮುಂದೆ ಇದೆ. ಈ ವಿಚಾರದ ಬಗ್ಗೆ ಸಿಂಧ್ಯಾ ಅವರು, ಚರ್ಚೆಮಾಡಿದ್ದಾರೆ. ಬಹಳ ವಿಸ್ತಾರವಾಗಿ ಸಿಂಧ್ಯಾ ಅವರು, ಬೈರೇಗೌಡರು, ಯಡಿಯೂರಪ್ಪನವರು ಎಲ್ಲಾ ವಿಚಾರಗಳನ್ನು ಬಹಳ ಕಣ್ಣಿಗೆ ಕಂಡಹಾಗೆ ವರ್ಣಿಸಿದ್ದಾರೆ. ಅದನ್ನೆಲ್ಲಾ ಇಲ್ಲಿ ನಾನು ಓದಿ ಹೇಳಬೇಕಾಗಿಲ್ಲವೆಂದು ಭಾವಿಸುತ್ತೇನೆ. ತಾವೇ ಸ್ವತಃ ನೋಡಿದ ಹಾಗೆ ವರ್ಣಿಸಿದ್ದೀರಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಅಂದರೆ ಕುಷ್ಟಗಿ ಪ್ರಕರಣದ ವರದಿಯ ಆಧಾರದಮೇಲೆ ಇಲ್ಲಿ ಕೂಡಾ ಏನೂ ನಡೆದಿಲ್ಲ ಎಂದು ಹೇಳಿಬಿಡಿ.

ಶ್ರೀ ಸಿ. ಬೈರೇಗೌಡ : ಅಲ್ಲಿ ಶರಣವ್ವ ಆಗಲೀ, ಅಥವಾ ಶರಣವ್ವಳ ತಾಯಿ ಆಗಲೀ ದೂರನ್ನು ಕೊಟ್ಟಿರಲಿಲ್ಲ. ಇಲ್ಲಿ ಕಣ್ಣಪ್ಪ ಸ್ವತಃ ದೂರು ಕೊಟ್ಟಿದ್ದಾನೆ. ಅಷ್ಟೇ ಅಲ್ಲದೆ ಕಣ್ಣಪ್ಪ ಪುನಃ ಪತ್ರಿಕಾ ವರದಿಗಾರರ ಎದುರು ಬಂದು ಏನು ನಡೆದಿದೆ ಎಂದು ಹೇಳಿದ್ದಾನೆ ಅದನ್ನೂ ಇದನ್ನೂ ತಾವು ಒಂದೇ ಎಂದು ಭಾವಿಸಬಾರದು. ಅಲ್ಲಿ ಇರುವುದೇ ಬೇರೆ, ಇಲ್ಲಿ ಇರುವುದೇ ಬೇರೆ. ಪತ್ರಿಕೆಯಲ್ಲಿ ಬಂದಿರತಕ್ಕದ್ದು ಅವನು ಏನು ದೂರು ಕೊಟ್ಟಿದ್ದಾನೆ ಅದು ವರದಿಯಾಗಿದೆ. ಮತ್ತು ಪತ್ರಿಕೆಯ ಸಂದರ್ಶನ ಮಾಡಿದಾಗ ಏನು ಬಂದಿದೆ ಅದು ಪತ್ರಿಕೆಯಲ್ಲಿ ಬಂದಿದೆ. ಪತ್ರಿಕಾ ವರದಿ ಏನೂ ಸೃಷ್ಟಿ ಆಗಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ನಾನು ಹೇಳಿಲ್ಲ. ಆದರೆ ವಿಚಾರ ಹೇಳಿದೆ. ವದಂತಿ ಯಾವ ಕಡೆಯಿಂದಲೂ ಬರಬಹುದು. ಆದರೆ ಸರಿಯಾದ ಪುರಾವೆ ಇಲ್ಲದೇ ಅಂತಹ ವಿಚಾರಗಳಿಗೆ ಪ್ರಕಟಣೆಯನ್ನು ಕೊಟ್ಟಾಗ ಯಾವ ಅನಾಹುತ ಈ ಸಮಾಜದ ಮೇಲೆ ಆಗುತ್ತದೆ ಎಂದು ವಿಚಾರಗಳಿಗೆ ಹೇಳಿದೆ. ಸನ್ಮಾನ್ಯ ಅಧ್ಯಕ್ಷರೇ, ಈ ವಿಚಾರದಲ್ಲಿ 28ಕ್ಕೆ ಘಟನೆ ಆಯಿತು ಎಂದು ಹೇಳಿ ವಿಚಾರ ಎತ್ತಿದ್ದಾರೆ. ಆ ಕೇಸ್ ರಿಜಿಸ್ಟರ್ ಆಗಿದೆ. 29-1-94ರಲ್ಲಿ ಫಿರ್ಯಾದಿ ಬಗ್ಗೆ ತನಿಖೆ ನಡೆದಿದೆ. ಆ ವರದಿ ಬಂದಿದೆ. ವೈದ್ಯಾಧಿಕಾರಿ ಕೂಡಾ ಪರಿಶೀಲನೆ ಮಾಡಿ ಯಾವುದೇ ಗಾಯ ಆಗಿಲ್ಲ ಎಂದು ವರದಿ ಕೊಟ್ಟಿದ್ದಾರೆ. ಬೆನ್ನಮೇಲೆ ಕಚ್ಚಿ, ಗಾಯಗೊಳಿಸಿದರು, ಗುದ್ದಿ ಕಾಲು ಮೇಲೆ ಒದ್ದರು, ಮುಖದ ಮೇಲೆ ಉಗಿದರು ಎಂದೆಲ್ಲಾ ಆಪಾದನೆಗಳು ಇವೆ. ಆದರೆ ಇಲ್ಲಿ ಡಾಕ್ಟರ್ ಸರ್ಟಿಫಿಕೇಟ್ ಬಂದಿದೆ. ಡಾಕ್ಟರ್ ಸರ್ಟಿಫಿಕೇಟ್ ನೋಡಿದಾಗ ಯಾವುದೇ ರೀತಿಯ ಗಾಯ ಆಗಿಲ್ಲ ಎಂದು ತಿಳಿಯುತ್ತದೆ. ಮಲ ತಿನ್ನಿಸಿದ ಬಗ್ಗೆ ಕೂಡಾ ಎಲ್ಲಾ ವಿಚಾರಣೆ ಆಗಿದೆ. ಹರಟೆ ಗ್ರಾಮದ, ಕೊಟೆಗಾನಹಳ್ಳಿ ಗ್ರಾಮದ ಹಿರಿಯರು ಸೇರಿ 31.1.94ರಂದು ಸಭೆ ಸೇರಿ, ಸ್ವಯಂಪ್ರೇರಣೆಯಿಂದ ಮಲ ತಿನ್ನಿಸಿದ ಪ್ರಕರಣ ಸುಳ್ಳು ಎಂದು ದಿನಪತ್ರಿಕೆಗಳಿಗೆ ವಿನಂತಿಸಿಕೊಂಡಿದ್ದಾರೆ.

ಅದು ಸುಳ್ಳು ಎಂದು ಪ್ರಕಟಿಸಲು ದಿನಪತ್ರಿಕೆಗಳಿಗೆ ವಿನಂತಿಸಿಕೊಂಡಿದ್ದಾರೆ. ಇದೆಲ್ಲಾ ಸಾಕಷ್ಟು ಸಾರ್ವಜನಿಕರು ವಿಚಾರ ಮಾಡಿದ್ದಾರೆ. ವೈದ್ಯಾಧಿಕಾರಿಗಳೂ ವಿಚಾರ ಮಾಡಿದ್ದಾರೆ. ಎಸ್ಪಿಯವರೂ ವಿಚಾರ ಮಾಡಿದ್ದಾರೆ. ಡಿಐಜಿಯವರೂ ವಿಚಾರ ಮಾಡಿದ್ದಾರೆ. ಈಗ ಸಿಆರ್ಇ ಸೆಲ್ಲವರು ವಿಚಾರಣೆಗೆ ಹೋಗಿದ್ದಾರೆ ಮತ್ತೆ ಕರ್ನಾಟಕ ದಲಿತ ಜಿಲ್ಲಾ ಸಂಘರ್ಷ ಸಮಿತಿ ಕೂಡಾ ಒಂದು ಹೇಳಿಕೆ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಅದನ್ನು ಓದುತ್ತೇನೆ. ಅದು ಸತ್ಯವೋ ಸುಳ್ಳೋ ತಮಗೆ ಬಿಟ್ಟಿದ್ದು. ಅವರು ಹೇಳಿದ್ದಾರೆ. ಮಲ ತಿನ್ನಿಸಿದ ಪ್ರಕರಣ ರಾಜಕೀಯ ಉದ್ದೇಶದಿಂದ ಈ ಪ್ರಕರಣ ಸೃಷ್ಟಿಸಲಾಗಿತ್ತು. ರಾಜಕೀಯ ಕಾರಣಕ್ಕೆ ದಲಿತರನ್ನು ಬಲಿ ಪಶು ಮಾಡುವ ಇಂತಹ ಪ್ರಕರಣಗಳಿಗೆ ದಲಿತ ಸಂಘರ್ಷ ಸಮಿತಿ ಬೆಂಬಲ ನೀಡುವುದಿಲ್ಲ ಎಂದು ಜಿಲ್ಲಾ ಸಮಿತಿಯವರು ಹೇಳಿದ್ದಾರೆ.

4.30 ಪಿ.ಎಂ

ದಲಿತ ಸಂಘರ್ಷ ಸಮಿತಿಯವರು ಎಲ್ಲ ಅಧ್ಯಯನ ಮಾಡಿ ಹೇಳಿದಮೇಲೆ ಆ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಸಮಿತಿಯವರು ಏನು ಮಾಡಿದ್ದಾರೆ, ಅದನ್ನು ಹೇಳುವುದಕ್ಕೆ ನಾನು ಅಪೇಕ್ಷೆ ಪಡುವುದಿಲ್ಲ, ಅದನ್ನು ನಾಗರಾಜ್ರವರು ಈಗಾಗಲೇ ಹೇಳಿದ್ದಾರೆ. ಈ ಪ್ರಕರಣದಲ್ಲಿ ತಾಲ್ಲೂಕು ಕಾಂಗ್ರೆಸ್(ಐ) ಸಮಿತಿಯ ಅಧ್ಯಕ್ಷರು ಶ್ರೀ ವೆಂಕಟರಾಮಗೌಡರ ಪಾತ್ರ ಏನೂ ಇಲ್ಲವಾದರೂ ರಾಜಕೀಯ ಉದ್ದೇಶದಿಂದ

ಜನತಾದಳದ ಕೆಲವರು ದಲಿತ ಕಣ್ಣಪ್ಪನ ಮೂಲಕ ನಡೆದ ಸಣ್ಣ ಘಟನೆಗೆ ಬಣ್ಣ ಹಚ್ಚಿ ವೆಂಕಟರಾಮೇಗೌಡರ ಮೇಲೆ ಸುಳ್ಳು ದೂರು ನೀಡುವಂತೆ ಪ್ರೇರೇಪಿಸಿದ್ದಾರೆಂದು ದಲಿತ ಮುಖಂಡರು ಆರೋಪಿಸಿದ್ದಾರೆ. ಇದು ದಲಿತ ಸಂಘರ್ಷ ಸಮಿತಿಯವರು ಕಾಂಗ್ರೆಸ್ಸಿನವರ ಮೇಲೆ ಮಾಡಿದಂಥ ಆಪಾದನೆ ಅಲ್ಲ. ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿಯವರು ಮಾಡಿದಂಥ ಆಪಾದನೆ. ಅದು ತಮಗೆ ಬಿಟ್ಟಿದ್ದು. ಅದಕ್ಕೂ ಇದಕ್ಕೂ ವ್ಯತ್ಯಾಸ ಇದೆ. ನಾನು ಅದನ್ನು ವಿಮರ್ಶೆ ಮಾಡುವುದಕ್ಕೆ ಹೋಗುವುದಿಲ್ಲ. ಈಗ ಈ ಘಟನೆ ಬಗ್ಗೆ ತಾವು ಇನ್ನೂ ತನಿಖೆ ಆಗಬೇಕೆಂದು ಹೇಳಿದರೆ I am prepared. ಈಗ ಇಷ್ಟೆಲ್ಲಾ ತನಿಖೆಯಾಗಿದೆ. ಸಿ.ಓ.ಡಿ. ಎನ್ಕ್ವೈರಿ ಮಾಡಬೇಕಾದರೂ ಕೂಡ, I am prepared to order for a C.O.D. enquiry. ಬೇಕಾದರೆ ಅದು ತಮಗೆ ಬಿಟ್ಟಿದ್ದು. ಕುಷ್ಟಗಿಗೆ ಏನು ಹೋಗಿದೆ, ಅದೇ ರೀತಿಯಲ್ಲಿ ರೆಜಿಸ್ಲೇಚರ್ನ ಶೆಡ್ಯೂಲ್ಡ್ ಕಾಸ್ಟ್ ಕಮಿಟಿಯು ಹೋಗಿ ತನಿಖೆ ಮಾಡುವುದಿದ್ದರೆ, we are prepared for that.

ಆ ಕಮಿಟಿಯವರು ಹೋಗಿ ತನಿಖೆ ಮಾಡಿ, ಅದರ ವರದಿಯೂ ಬರಲಿ. ನಮಗೆ ಏನೂ ಅಡ್ಡಿ ಇಲ್ಲ. Nothing to be suppressed. Let the Committee go and make an enquiry. Anybody in that connection, let them give a report ಆ ಸಮಿತಿ ಹೇಗೋ ಇದೆ. ಕುಷ್ಟಗಿ ಪ್ರಕರಣದ ಬಗ್ಗೆ ಎಸ್ಸಿ. ಎಸ್ಟಿ ಕಮಿಟಿ ಹೋಗಿ ತನಿಖೆ ಮಾಡಿದೆ. ನಾವು ಸಿ.ಓ.ಡಿ ತನಿಖೆ ಮಾಡಿಸುತ್ತೇವೆ. ಅದರಲ್ಲಿ ಸಿ.ಓ.ಡಿ. ಯವರು.......

ಶ್ರೀ ಸಿ. ಬೈರೇಗೌಡ : ಅಧ್ಯಕ್ಷರೇ ....

ಉಪಾಧ್ಯಕ್ಷರು : ಅವರು ಯೀಲ್ಡ್ ಆಗಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ನೀವು ಈ ತರಹ ಮಾತನಾಡಿದರೆ ಬೈರೇಗೌಡರು ರಾಜಕೀಯಕ್ಕಾಗಿ ಇದನ್ನು ಮಾಡುತ್ತಿದ್ದಾರೆ ಎಂದು ಸಾಬೀತಾಗುತ್ತದೆ. ಇನ್ನೂ ನೀವು ಇದರ ಬಗ್ಗೆ ಮಾತನಾಡಿದರೆ ಬೈರೇಗೌಡರು ರಾಜಕೀಯ ಯಾರಿಗಾಗಿ ಈ ಕೆಲಸ ಆಗಿದೆ ಎಂದು ಹೇಳಿ ನಮ್ಮ ಕಡೆಯಿಂದ ನಾವು ಆಪಾದನೆ ಮಾಡಬೇಕಾಗುತ್ತದೆ.

ಶ್ರೀ ಸಿ. ಬೈರೇಗೌಡ : ಎಷ್ಟು ಬೇಕಾದರೂ ನೀವು ಮಾಡಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಈ ರೀತಿ ಒಂದು ಅನುಕಂಪದಿಂದ ಬರುವಂಥ ಮಾತೇನಿದೆ, ಈ ಒಂದು ಮನೋಭೂಮಿಕೆ ನಿಮಗೆ ....

ಶ್ರೀ ಸಿ. ಬೈರೇಗೌಡ : ನಾನು ಮತ್ತು ನಾಗರಾಜ್‌ವರು ಅಲ್ಲಿ ಒಟ್ಟಿಗೇ ಇದ್ದೆವು.

(ಸಭೆಯಲ್ಲಿ ಅತೀವ ಗೊಂದಲ. ಅನೇಕ ಸದಸ್ಯರು ಏಕ ಕಾಲದಲ್ಲಿ ಮಾತನಾಡಲು ಪ್ರಾರಂಭಿಸಿದರು)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಎಂದರೆ ಏನು ಅರ್ಥ. ಇದನ್ನು ಎಕ್ಸಪಂಜ್ ಮಾಡಿಸಿ.

(ಗೊಂದಲ)

ಶ್ರೀ ಸಿ. ಬೈರೇಗೌಡ : ನಾನು ಮತ್ತು ನಾಗರಾಜ್ರವರು ನಾಲ್ಕು ದಿವಸ ಕೇರಳ ಮತ್ತು ತಮಿಳುನಾಡಿನಲ್ಲಿ ಪ್ರವಾಸದಲ್ಲಿದ್ದೆವು. ನಾವು ಒಟ್ಟಿಗೆ ಇದ್ದೆವು. ನಾನು ಏಕೆ ವಾಪಸ್ಸು ತೆಗೆದುಕೊಳ್ಳಬೇಕು? ನಾನಾಡಿದ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕಾದ

ಅವಶ್ಯಕತೆ ಇಲ್ಲ, ನಾನು ಪ್ರಾರಂಭದಲ್ಲೇ ಹೇಳಿದ್ದೇನೆ. ನಾನು ಇರಲಿಲ್ಲ ಎಂದು. ಹೊರಗಡೆ ಪ್ರವಾಸಕ್ಕೆ ಹೋಗಿದ್ದೆ. ಈ ವಿಚಾರ ನನಗೆ ಗೊತ್ತಿರಲಿಲ್ಲ ಎಂಬ ಮಾತನ್ನು ಮೊದಲೇ ಹೇಳಿದ್ದೇನೆ. ಈ ರೀತಿಯಾಗಿ ಪ್ರಚೋದನೆ ಮಾಡಬೇಕಾದ ಅವಶ್ಯಕತೆ ನನಗಿಲ್ಲ.

(ಗೊಂದಲ)

ಅನೇಕ ಮಾನ್ಯ ಸದಸ್ಯರುಗಳು ಏಕಕಾಲದಲ್ಲಿ ಮಾತನಾಡಲು ಪ್ರಾರಂಭಿಸಿದರು)

ಉಪಾಧ್ಯಕ್ಷರು : ಇದುವರೆಗೂ ವಿರೋಧ ಪಕ್ಷದ ನಾಯಕರು ಮತ್ತು ಕೆಲವು ಸದಸ್ಯರು ....

ಶ್ರೀ ಸಿ. ಬೈರೇಗೌಡ : ಅವರು ಹಾಗೆ ಹೇಳತಕ್ಕದ್ದು ಯಾವ ಕಾನೂನಿನಲ್ಲಿ ಅವಕಾಶ ಇದೆ? ನ್ಯಾಯಾಲಯ ಆ ಕೆಲಸವನ್ನು ಮಾಡುತ್ತದೆ.

ಉಪಾಧ್ಯಕ್ಷರು : ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಕೆ.ಎಚ್. ರಂಗನಾಥ್ : ನನಗೆ ಮಾನ್ಯ ಬೈರೇಗೌಡರ ಬಗ್ಗೆ ತುಂಬಾ ಗೌರವ ಇದೆ. ಅವರು ಈ ಮನೆಯ ಬಹಳ ಹಿರಿಯ ಸದಸ್ಯರು ಹಿಂದೆ ಮಂತ್ರಿಯಾಗಿದ್ದವರು. ಕನ್ನಡದಲ್ಲಿ ಅವರು ಹೇಳಿದ ಮಾತು ಅನ್ಪಾರ್ಲಿಮೆಂಟರಿ ಆಗದೇ ಇರಬಹುದು. ಆದರೆ ಕನ್ನಡದಲ್ಲಿ ಮಾತನಾಡುವಾಗ ಮನಸ್ಸಿಗೆ ಅತಿ ಬೇಸರವಾಗುವಂಥ ಮಾತನ್ನು ಅವರು ಬಳಸಿದ್ದಾರೆ.

ಈ ಮಾತನ್ನು ಅವರು ಅನ್ನಬಹುದೇ? ನಾನು ಈ ಸಭೆಯಲ್ಲಿ ಅವರನ್ನು ಕೇಳುತ್ತೇನೆ. ಈ ಸಭೆಯ ವೇದಿಕೆಯನ್ನು ಬಳಸಿಕೊಂಡು ಈ ಮಾತನ್ನು ಆಡಬಹುದೇ? ಹೀಗೆ ವರ್ತಿಸಬಹುದೇ? ಯಾರೋ ಹೊಸಬರು ಬಂದು ಮಾತನಾಡಿದ್ದರೆ ಸಹಿಸಿಕೊಳ್ಳಬಹುದಿತ್ತು. ಈ ಮಾತನ್ನು ಅವರು ಹಿಂದಕ್ಕೆ ತೆಗೆದುಕೊಳ್ಳಬೇಕು. He should express his apology to this House for having used that word in that manner. It should not go into the records. That is not good. ನಾನು ಸೌಜನ್ಯದಿಂದ ಅದರಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ, ಈ ಮಾತನ್ನು ನಾನು ಅನ್ನಬಾರದಾಗಿತ್ತು ಎಂದು ಅವರು ಹೇಳಬೇಕಾಗುತ್ತದೆ.

ಶ್ರೀ ಸಿ. ಬೈರೇಗೌಡ : ಈ ಸದನದಲ್ಲಿ ನನಗೆ ಅತ್ಯಂತ ಹೆಚ್ಚಿನ ಗೌರವ ಇದೆಯೆಂದರೆ ಅದು ಶ್ರೀಮಾನ್ ರಂಗನಾಥರ ಬಗ್ಗೆ.

Sri K.H. Ramgnath : I don't agree with you ಈ ಸದನಕ್ಕೆ ಗೌರವ ಇಟ್ಟುಕೊಳ್ಳಬೇಕಾಗುತ್ತದೆ.

(ಗೊಂದಲ)

ಶ್ರೀ ಕೆ.ಎಚ್. ರಂಗನಾಥ್ : ಸ್ವಾಮಿ, You have made me that ಇದು ಅಪ್ಸೆಟ್ ಆಗತಕ್ಕಂಥ ಮಾತಲ್ಲ. ಅವರ ಹತ್ತಿರ ಅಂಕಿಅಂಶಗಳು ಇದ್ದರೆ, ಸರ್ಕಾರವನ್ನು ಕಂಡೆಮ್ ಮಾಡುವುದಿದ್ದರೆ, ಕಠಿಣ ಶಬ್ದದಲ್ಲಿ ಯಾವ ರೀತಿಯಲ್ಲಿ ಬೇಕೋ ಅದನ್ನು ಮಾಡಲಿ. ಆದರೆ ಅದು ಬಿಟ್ಟು ಹೀಗೆ ಮಾತನಾಡಿದರೆ ಹೇಗೆ?

ಶ್ರೀ ಸಿ. ಬೈರೇಗೌಡ : ಅವರಿಗೆ ತಪ್ಪು ಭಾವನೆ ಬರಬಾರದು ಎನ್ನುವ ಕಾರಣಕ್ಕೆ ದಯವಿಟ್ಟು ನನಗೆ ಹೇಳುವುದಕ್ಕೆ ಅವಕಾಶ ಮಾಡಿಕೊಡಬೇಕು. ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಆವತ್ತು ಬೆಳಿಗ್ಗೆ 7-45ರ ಗಂಟೆಗೆ ತಿರುವಂತಪುರಕ್ಕೆ ಹೋಗಬೇಕಾಗಿತ್ತು. ಪತ್ರಿಕೆಯಲ್ಲಿ ಬಂದಿರುವುದು ಬಿಟ್ಟರೆ ಬೇರೇನೂ ನನಗೆ ಗೊತ್ತಿಲ್ಲ.

(ಗೊಂದಲ)

ಶ್ರೀ ಕೆ.ಎಚ್. ರಂಗನಾಥ್ : ದಯವಿಟ್ಟು ಕೇಳಿ. ಇದು ಅನಾವಶ್ಯಕವಾಗುತ್ತದೆ. ತದನಂತರ ಅವರು ಎಕ್ಸ್‌ಪ್ಲೆನ್ ಮಾಡಲಿ. ಅವರು ಸದನದ, ತಮ್ಮ ಕ್ಷಮೆ ಕೇಳಬೇಕು.

ಶ್ರೀ ಸಿ. ಬೈರೇಗೌಡ : ಅವರು ಮಾತ್ರ ಏನು ಬೇಕಾದರೂ ಹೇಳಬಹುದೇ? ನಾನು ಚಿತಾವಣೆ ಮಾಡಿದ್ದೇನೆ ಎಂದು ಹೇಳಿದ್ದಾರಲ್ಲಾ, ಯಾವ ಆಧಾರದ ಮೇಲೆ ಹೇಳಿದ್ದಾರೆ?

ನಾನು ತಯಾರಾಗಿದ್ದೇನೆ. ಯಾವ ಕಾನೂನಿನಲ್ಲಿದೆ? ಅದನ್ನು ಅವರು ಸಾಬೀತು ಮಾಡಲಿ

Sri R.V. Deshapande : I have not gone to justify. But, at the same time, I would like to bring to your attention what the Hon. Chief Minister has said.

ಮುಖ್ಯಮಂತ್ರಿಯವರು ಅವರು ರಾಜಕೀಯ ಮಾಡುತ್ತಿದ್ದಾರೆ ಎಂದು ಹೇಳಿದ್ದಾರೆ.

ಶ್ರೀ ಕೆ.ಎಚ್. ರಂಗನಾಥ್ : ಸದನದಲ್ಲಿ ನಾವು ಸತ್ ಸಂಪ್ರದಾಯವನ್ನು ಹಾಕಬೇಕಾಗುತ್ತದೆ. ಅದು ಬಿಟ್ಟು ಹೇಗೆ ಬೇಕೋ ಹಾಗೆ ನಡೆಯುವುದಕ್ಕೆ ಆಗುವುದಿಲ್ಲ.

ಶ್ರೀ ಸಿ. ಬೈರೇಗೌಡ : ಅದನ್ನು ಅವರು ಏಕೆ ಹೇಳಿದರು?

(ಗೊಂದಲ)

ಉಪಾಧ್ಯಕ್ಷರು : ವಿರೋಧ ಪಕ್ಷದ ನಾಯಕರು ಮತ್ತು ವಿರೋಧ ಪಕ್ಷದ ಕೆಲವು ಸದಸ್ಯರು........

Sri K.H. Ranganath : ಹಾಗಲ್ಲ. No, no. I am very serious about these things. ಮಾನ್ಯ ಸದಸ್ಯರಿಗೆ ಏನೂ ತೊಂದರೆಯಾಗುವುದಿಲ್ಲ. ನನ್ನದು ತಪ್ಪಾಗಿದೆಯೆಂದು ಅವರು ಹೇಳಬೇಕಾಗುತ್ತದೆ. ಅದು ಕಡತದಲ್ಲಿ ಹೋಗಲಾರದು. That type of behaviour is below the dignity of this august House.

ಶ್ರೀ ಸಿ. ಬೈರೇಗೌಡ : ತಾವು ಹೇಳಿದ್ದನ್ನು ನಾನು ಗಮನಹರಿಸಿ ಕೇಳಿದ್ದೇನೆ. ಮುಖ್ಯಮಂತ್ರಿಗಳು ಇದಕ್ಕೆ ನೀವು ಚಿತಾವಣೆ ಮಾಡಿದ್ದೀರಿ. ಎಂದು ಅವರು ಯಾವ ಆಧಾರದ ಮೇಲೆ ಹೇಳಿದರು? ಈ ರೀತಿ ಆರೋಪ ಹೊರಿಸಿದರೆ ಈ ಶಬ್ದವನ್ನು ಬಳಸಬೇಕಾಗುತ್ತದೆ, ಇನ್ನೂ ಕಠಿಣವಾದ ಪದಗಳನ್ನು ಬಳಸಬೇಕಾಗುತ್ತದೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಮುಖ್ಯಮಂತ್ರಿಗಳು ಹೇಳಿದರು ಎಂದು ಹೇಳಿದರು. ಹಿಂದೆ ಪ್ರಜಾವಾಣಿ ಪತ್ರಿಕೆಯವರೇ ಕೋಟ್ ಮಾಡಿದ್ದರು. ಕೆಲವು ಜನತಾದಳ ಮುಖಂಡರು ಇದನ್ನು ಸೃಷ್ಟಿಮಾಡಿದ್ದಾರೆ ಎಂದು ಅವರೇ ಪಬ್ಲಿಷ್ ಮಾಡಿದ್ದಾರೆ. ಅದು ಬರೀ ನಮ್ಮ ಪಕ್ಷದವರು ಹೇಳತಕ್ಕದ್ದು ಅಲ್ಲ. ಸಾರ್ವಜನಿಕರ ಅಭಿಪ್ರಾಯ ಬಂದಿದೆ. ಅದು ಸರಿಯೋ ತಪ್ಪೋ ಎಂದು ವಿಚಾರ ಮಾಡಬೇಕಾದದ್ದು ಅವರ ಕರ್ತವ್ಯವೆಂದು ಹೇಳಿದ್ದಾರೆ.

ಶ್ರೀ ಆರ್.ವಿ. ದೇಶಪಾಂಡೆ : ನಾನು ಮಾತನಾಡುವಾಗ ಬಹಳ

ಸ್ಪಷ್ಟವಾಗಿ ಹೇಳಿದ್ದೇನೆ. ನಮ್ಮ ಪಕ್ಷದವರು ಇದ್ದರೆ ಕ್ರಮ ತೆಗೆದುಕೊಳ್ಳಿ ಎಂದು ನಾನು ಹೇಳಿದ್ದೇನೆ. I have said it. Even if my people are involved, you take action.

ಇಲ್ಲಿ ಜನತಾದಳ, ಕಾಂಗ್ರೆಸ್ ಎಂದು ಪ್ರಶ್ನೆ ಇಲ್ಲ. ಇಂತಹ ಘಟನೆ ಯಾರು ಮಾಡಿದ್ದಾರೋ, ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಜನತಾದಳ, ಬಿಜೆಪಿ ಎಂದು ನೋಡಿಕೊಂಡು ಹೋಗುವುದಕ್ಕೆ ಆಗುವುದಿಲ್ಲ. ಹಾಗಾಗಿ ಈಗ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು ದಲಿತ ಸಂಘರ್ಷ ಸಮಿತಿಯವರು ಹಾಗೆ ಹೀಗೆ ಹೇಳಿದ್ದಾರೆ ಎಂದು.

ಶ್ರೀ ಕೆ.ಹೆಚ್. ರಂಗನಾಥ್ : ನಾನು ಅವರ ಸೌಜನ್ಯಕ್ಕೆ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. I appeal to his good conscience. He should rise above this. ನಾವು, ನಮ್ಮದು ಇದೆ ಎಂದು ಹೇಳಿದರೆ ಸರಿಹೋಗುತ್ತದೆಯೇ? ಒಂದು ವೇಳೆ ಮುಖ್ಯಮಂತ್ರಿಗಳು ತಪ್ಪು ಮಾಡಿದರೆ, ತಾವು ಶಾಂತವಾಗಿ ಕುಳಿತುಕೊಂಡು, you raise that objection. Make use of the privileges of this august House.

ದಯಮಾಡಿ, ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಅವರು ಕ್ಷಮೆ ಕೇಳಬೇಕಾಗುತ್ತದೆ. ಮತ್ತೆ ಅದು ಕಡಿತದಿಂದ ಹೋಗಬೇಕು. ತಾವು ಅಬ್ಸರ್ವ್ ಮಾಡಿದರೋ ಇಲ್ಲವೋ ಗೊತ್ತಿಲ್ಲ. ಉಪಾಧ್ಯಕ್ಷರೇ, ತಾವು ಎಲ್ಲಾ ಕಡೆಗೂ ನೋಡಬೇಕು. ಒಂದೇ ಕಡೆ ತಮ್ಮ ಕಣ್ಣು ಕೂಡ ಇಡಬಾರದು. ಇಲ್ಲದೇ ಹೋದರೆ ಏನಾಗುತ್ತದೆ. Are we not creating had precedents here?

ಶ್ರೀ ಸಿ. ಬೈರೇಗೌಡ : ನಾನು ಕೇಳಿದ್ದೇನು? ಅವರು ಹೇಳುತ್ತಾ ಇದ್ದರು ಮಾತಾಡಿದ್ದಿಲ್ಲ, ಮಾಡಿಲ್ಲ ಎನ್ನತಕ್ಕಂತಾದ್ದು. ಅದಕ್ಕೆ, ಅವರನ್ನು ಬಂಧಿಸಿಲ್ಲ ಎನ್ನತಕ್ಕ ಮಾತನ್ನು ಹೇಳಿದರು. ಆದರೆ, ನಾನು ಕೇಳಿದುದ್ದು ಇಷ್ಟೆ. ಇದು ಯಾವ ಕಾನೂನಿನಲ್ಲಿ ಹೇಳುತ್ತದೆ? ಒಂದೂ ದೂರು ರಿಜಿಸ್ಟರ್ ಆದಮೇಲೆ, ಅದಕ್ಕೆ ವಿಧಿ ವಿಧಾನಗಳಿವೆ. ಅದನ್ನು ಅನುಸರಿಸಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಅದು ನಡೆದಿದೆಯೋ ಇಲ್ಲವೋ ಎನ್ನತಕ್ಕ ಪ್ರಶ್ನೆ ನ್ಯಾಯಾಲಯದಲ್ಲಿ ತೀರ್ಮಾನವಾಗಬೇಕಾಗುತ್ತದೆ. ನಾನು ವಕೀಲನಲ್ಲ. ಆದರೆ, ಸ್ವಲ್ಪ ನ್ಯಾಯದ ಅರಿವು ನನಗೆ ಗೊತ್ತಿದೆ. ಇದರ ಬಗ್ಗೆ, ಇವರೇ ಒಂದು ತೀರ್ಮಾನಕ್ಕೆ ಬಂದಿದ್ದಾರೆ. ಯಾವ ಕಾನೂನಿನಲ್ಲಿ ಹೇಳಿದೆ ಎನ್ನುವುದನ್ನು ನಾನು ಕೇಳಿದೆ. ಅದಕ್ಕೆ ನೀವು ಚಿತಾವಣೆ ಮಾಡಿದ್ದೀರಿ ಎನ್ನತಕ್ಕ ಮಾತನ್ನು ಹೇಳಿದಿರಿ. ನಾವು ಚಿತಾವಣೆ ಮಾಡಿದ್ದರೆ, ಯಾವ ಕಾನೂನಿನ ಮೇಲೆ ನನ್ನನ್ನು ಕ್ರಮ ತೆಗೆದುಕೊಳ್ಳುತ್ತೀರೋ, ತೆಗೆದುಕೊಳ್ಳಿ.

ಶ್ರೀ ಕೆ.ಹೆಚ್. ರಂಗನಾಥ್ : ದಯಮಾಡಿ, ಈ ಸದನದಲ್ಲಿ, ನಿಜವಾದುದಲ್ಲದ್ದನ್ನು ಸತ್ಯಾವಾದುದಲ್ಲದ್ದನ್ನು ಯಾವುದೇ ಸದನದ ಸದಸ್ಯ, ಅವರು ಮಂತ್ರಿಗಳಾಗಿರಲಿ, ಮುಖ್ಯಮಂತ್ರಿಗಳಾಗಲಿ, ಸದನದ ಸದಸ್ಯರೇ ಆಗಿರಲಿ ಹೇಳಿದರೂ ಕೂಡ, ಆ ಒಂದು ಅಪರಾಧಕ್ಕೆ ಶಿಕ್ಷೆ ಮಾಡತಕ್ಕ ಅಧಿಕಾರ ಈ ಸಭೆಗೆ ಇದೆ. ಮುಖ್ಯಮಂತ್ರಿಗಳು ಹೇಳಿದುದ್ದು ಸರಿಯಲ್ಲವೆಂದು ಹೇಳುವುದಾದರೆ, ತಾವು ಅದನ್ನು ಮಾಡಬಹುದು. ಅದನ್ನು ಬಿಟ್ಟು ತಮ್ಮ ವರ್ತನೆ ಯಾವ ರೀತಿ ಇದೆ. This type of word - what is this? ಪ್ರೇರಣೆ ಬಂದಿದೆ ಎಂದು ಏನು ಬೇಕಾದರೂ ಮಾಡುತ್ತೀರಾ? ಯಾರೋ ಪ್ರೇರಣೆ ಕೊಟ್ಟರು ಎಂದು ಈ ಸದನದಲ್ಲಿ ಕೆನ್ನೆಗೆ ಹೊಡೆಯುತ್ತೀರಾ? This type of argument is not relevant here.

ದಯಮಾಡಿ ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. With all this, I press for an order from the Speaker. Otherwise, this would go on like this.

ಇದಕ್ಕೆ ತಮ್ಮ ತೀರ್ಮಾನ ಆಗಬೇಕಾಗುತ್ತದೆ. ಮಾನ್ಯ ಸದಸ್ಯರು, ಅವರ ಸೌಜನ್ಯವನ್ನು ಹೆಚ್ಚು ಮಾಡುತ್ತದೆ. ನನ್ನ ವಿನಂತಿ, ಅವರ ದೌಜನ್ಯವನ್ನು ಹೆಚ್ಚು ಮಾಡುತ್ತದೆ.

ಈಗ ನಾನು ಅದಕ್ಕೇ ಬರುತ್ತಿದ್ದೇನೆ.

ಉಪಾಧ್ಯಕ್ಷರು : ಬೈರೇಗೌಡರೇ ದಯಮಾಡಿ ಕುಳಿತುಕೊಳ್ಳಿ.

ಶ್ರೀ ಸಿ. ಬೈರೇಗೌಡ : ಮುಖ್ಯಮಂತ್ರಿಗಲು ಚಿತಾವಣಿ ಮಾಡಿದ್ದೀರಿ ಎಂಬ ಪದವನ್ನು ಬಳಸಿದ್ದರಿಂದ, ನಾನು ಆ ಪದವನ್ನು ಬಳಸಬೇಕಾಯಿತು.

ಶ್ರೀ ಹೆಚ್. ಏಕಾಂತಯ್ಯ : ಮಾನ್ಯ ಹಿರಿಯ ಸಚಿವರು ಕೆಲವು ಮಾತುಗಳನ್ನು ಹೇಳಿದ್ದಾರೆ. ಅವರು ಬಳಸಿದಂಥ ಪದ, ಯಾರ ಮನಸ್ಸಿಗಾದರೂ ನೋವಾಗಿದ್ದರೆ ವಾಪಸ್ ತೆಗೆದುಕೊಳ್ಳುತ್ತೇವೆ ಎಂಬ ಮಾತು. ಆದರೆ, ಒಬ್ಬ ಮುಖ್ಯಮಂತ್ರಿಯವರು ಮತ್ತೊಬ್ಬ ಸದಸ್ಯರನ್ನು ಚಿತಾವಣಿ ಮಾಡುತ್ತಿದ್ದೀರಿ ಎಂಬ ಮಾತನ್ನು ಹೇಳುವುದಾದರೆ ರಾಜಕೀಯ ಮಾಡುತ್ತಿದ್ದೀರಿ ಎಂದು ಹೇಳುವುದಾದರೆ ನಾವು ಏನು ಮಾಡಬೇಕು? ಅದೇಕೆ ನಿಮಗೆ ಅಷ್ಟೊಂದು ಅವಸರ. I agree with you. ನಿಮ್ಮ ಕಡೆ ಆದಂಥ ತಪ್ಪನ್ನು ಮರೆಮಾಚುವ ಪ್ರಯತ್ನ ಏನಿದೆ.

ಶ್ರೀ ಕೆ.ಹೆಚ್. ರಂಗನಾಥ್ : ಏಕಾಂತಯ್ಯನವರೇ, ಚಿತಾವಣೆಗೂ, ಬಾಯಿಗೆ ಬಂದಹಾಗೆ ಎಂದು ಹೇಳುವುದಕ್ಕೂ ......

(ಗೊಂದಲ)

ಶ್ರೀ ಸಿ. ಬೈರೇಗೌಡ : ನಾವು ಯಾವ ರೀತಿ ಕೆಲಸ ಮಾಡಬೇಕೆಂದು ಗೊತ್ತಿದೆ. ಅವರು ಏನು ಬೇಕಾದರೂ ಮಾತನಾಡಬಹುದು.

ಶ್ರೀ ವಾಟಾಳ್ ನಾಗರಾಜ್ : ಮುಖ್ಯಮಂತ್ರಿಗಳ ಮೇಲೆ ಬೈರೇಗೌಡರು ಏನೋ ಹೇಳಿದರು ಎಂದು ಭೂತ ಸೃಷ್ಟಿ ಮಾಡಿದರೆ, ಹಗಲು ರಾತ್ರಿ 6 ತಿಂಗಳು, ಮುಖ್ಯಮಂತ್ರಿಗಳನ್ನು ಹಗಲು ರಾತ್ರಿ ಬೈದಿದ್ದಾರೆ, ಇಲ್ಲಿ ಅನೇಕ ಜನ .....

ಉಪಾಧ್ಯಕ್ಷರು : ನಾಗರಾಜ್ರವರೇ, ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನೀವು ಏನೇನು ಪದ ಹೇಳಿದ್ದೀರಿ, ಎಂದು ಗೊತ್ತಿದೆ. ನೀವೇನು ಮಾತನಾಡುತ್ತಿದ್ದೀರಿ. ನೀವು ಹಗಲು ರಾತ್ರಿ ಮುಖ್ಯಮಂತ್ರಿಗಳ ಮೇಲೆ ಬಿದ್ದಿದ್ದೀರಿ. ಅವರಿಗೆ ನಿದ್ದೆ ಕೊಡಲಿಲ್ಲ. ಏಕೆ ಸುಮ್ಮನೆ ಮಾತನಾಡುತ್ತೀರಿ?

ಶ್ರೀ ಕೆ.ಹೆಚ್. ರಂಗನಾಥ್ : ಹಾಗಾದರೆ, ಇಲ್ಲಿ ಎಲ್ಲರೂ ಬಟ್ಟೆಬಿಚ್ಚಿಕೊಂಡು ಕುಣಿಯೋಣವೇ? ಏನು ಮಾತನಾಡುತ್ತಿದ್ದೀರಿ? ಹಾಗಾದರೆ ಎಲ್ಲರೂ ಮಾಡಬಾರದ್ದನ್ನು ಮಾಡಿದ್ದಾರೆಯೇ?

ಉಪಾಧ್ಯಕ್ಷರು : ತಾವು ಮಾತನಾಡಬೇಕಾದರೆ ಸದನ ಅವಲೋಕನ ಮಾಡಿದಾಗ ಅದು ಸಾಂಪ್ರದಾಯಿಕವಾಗಿ ಅಲ್ಲದೆ ಇರಬಹುದು ಅನ್ ಪಾರ್ಲ್ಮೆಂಟರಿವರ್ಡ್ ಅಲ್ಲದೆ ಇರಬಹುದು.

ಶ್ರೀ ಕೆ.ಎಚ್. ರಂಗನಾಥ್ : ಮಾನ್ಯ ಅಧ್ಯಕ್ಷರೇ, I was the Speaker for 3 long years. ತಾವು ದಯಮಾಡಿ ಕೇಳಿ. ಅನ್ ಪಾರ್ಲಿಮೆಂಟರಿ ಅಲ್ಲದೇ ಇರುವುದು ಪ್ರಶ್ನೆ ಅಲ್ಲ, ಇಲ್ಲಿ ಏನೇನು ಆಗುತ್ತದೆಂದು ಸುಮಾರು 30 ವರ್ಷದ ಅನುಭವ ನನಗೆ ಇದೆ. ಅದು ಆಗಲ್ಲ. ನಾವು ಗೆಸ್ಚರ್ಸ್ ಕೂಡ ಮಾಡತಕ್ಕಂಥಾದ್ದು ಅಲ್ಲ ಎಂದು ಹೇಳಿ ನಮ್ಮ ರೂಲ್ಸ್ನಲ್ಲಿದೆ. ನಮ್ಮ ರೂಲ್ಸ್ನಲ್ಲಿದೆ ಗೆಸ್ಚರ್ಸ್ ಕೂಡ ಮಾಡಬಾರದು ಎಂದು ಅವರು ಉದ್ವೇಗದಲ್ಲಿ ಮಾತನಾಡಿದರು. ಅದಕ್ಕೆ ನಾನು ಅವರಿಗೆ ಹೇಳಿದೆ ತಮ್ಮ ಸೌಜನ್ಯವನ್ನು ಹೆಚ್ಚು ಮಾಡುತ್ತದೆ ಎಂದು ಈ ಸಭೆಗೆ ಇಲ್ಲ ನನ್ನದು

ತಪ್ಪಾಯಿತು ನಾನು ಮಾಡಬಾರದಾಗಿತ್ತು ನಾನು ಬಳಸಬಾರದಾಗಿತ್ತು ಅಂದರೆ ಸಾಕಾಗಿತ್ತು. ನಾವು ಉದ್ವೇಗದಲ್ಲಿ ಏನು ಬೇಕಾದರೂ ಮಾಡಬಹುದೇ?

ಉಪಾಧ್ಯಕ್ಷರು : ನಾನು ಬೈರೇಗೌಡರನ್ನು ಅದೇ ಕೇಳುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಸದನದ ಸಮಿತಿಗೆ ಒಪ್ಪಿಕೊಂಡಿದ್ದಾರೆ. ತಾವು ಯಾವ ರೀತಿ ಹೇಳುತ್ತೀರೋ ಆ ತರಹ ಎಲ್ಲಾ ಒಪ್ಪಿಕೊಂಡು ಆದ ಮೇಲೂ ನೀವು ಬಳಸಿದಂತಹ ಮಾತು ನೀವು ಗೆಸ್ಚರ್ ಏನು ಮಾಡಿದ್ದಿರಲ್ಲಾ ಅದು ತಪ್ಪು ಸಮಂಜಸವಾಗಿ ಕಾಣುವುದಿಲ್ಲ ಈಗ ಏನು ಮಾನ್ಯ ಹಿರಿಯ ರಂಗನಾಥ್‌ವರು ಹೇಳಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಈಗ ಇದೇನೂ ಹೊಸದಲ್ಲ Everything is on record. ನಾನೇನು ಹೇಳಿದೆ. ನಾನು ಒಂದು ಮತು ಹೇಳಲಿಲ್ಲ. ಇದು ಸತ್ಯ ಅಲ್ಲ. ನೀವು ಹೇಳಿದ್ದು ಎಂದು ನಾನು ಹೇಳಲೇ ಇಲ್ಲ. ನಾನು ಹೇಳಿದೆ ಇಂತಹ ವರದಿಗಳು ಬಂದಿದೆ ಎಸ್.ಪಿ.ಯಿಂದ ಬಂದಿದೆ. ಡಿ.ಐ.ಜಿ.ಯಿಂದ ಬಂದಿದೆ. ಸಿ.ಆರ್.ಸಿ.ಸೆಲ್ಲವರಿಂದ ಬಂದಿದೆ ದಲಿತ ಸಂರ್ಘಷ ಸಮಿತಿಯವರು ಹೇಳಿದ್ದಾರೆ ಎಂದು ಹೇಳಿದೆ ಅಷ್ಟೇ ಹೇಳಿ ಮುಗಿಸಿದೆ. ನನ್ನ ಸ್ವಂತ ಅಭಿಪ್ರಾಯ ನಾನು ಹೇಳಲೇ ಇಲ್ಲ. You can go through the records. I never said, because I never wanted to make it a big issue. ನಾನು ಹೇಳಲೇ ಇಲ್ಲ. ನೀವು ಹೇಳಿದ್ದೆಲ್ಲಾ ಸುಳ್ಳು ಎಂದು ನಾನು ಹೇಳಲೇ ಇಲ್ಲ. ಸತ್ಯಾಂಶ ಇಲ್ಲ ಎಂದೂ ನಾನು ಹೇಳಲಿಲ್ಲ. ಆ ಸೌಜನ್ಯವನ್ನು ನಾನು ಉಳಿಸಿಕೊಂಡೇ ಹೋಗಿದ್ದೇನೆ. ಇವತ್ತು ಏಕೆಂದರೆ ಅದು ಸುಳ್ಳು ಸತ್ಯ ಅಲ್ಲ ನೀವು ಹೇಳಿದ್ದು ಎಂದು ಹೇಳಿ ನಾನು ಹೇಳುತ್ತಾ ಇದ್ದರೆ ಸಿ.ಓ.ಡಿ ಮತ್ತು ಸದನದ ಸಮಿತಿ ಹೋಗುವಂತಹ ಅವಶ್ಯಕತೆ ಏನಿದೆ? I never said that. ಆಮೇಲೆ ನಾನು ಹೇಳಿದೆ ಇಷ್ಟು ಇದ್ದರೂ ಕೂಡ ನಾನು ಏನು ಹೇಳಿದೆ ಸಿ.ಓ.ಡಿಗೆ ಒಪ್ಪಿಸುತ್ತೇನೆಂದು ಹೇಳಿದೆ. ಆಮೇಲೆ ನಾನು ಏನು ಹೇಳಿದೆ ಎಸ್.ಸಿ. ಎಸ್.ಟಿ ಶಾಸಕಾಂಗದ ಸಮಿತಿ ಹೋಗಿ ತನಿಖೆ ಮಾಡಲಿ ಎಂದೂ ಕೂಡ ನಾನು ಹೇಳಿದೆ. We must understand.

ನಾನು ಪ್ರಾಮಾಣಿಕವಾಗಿ ವರ್ತನೆ ಮಾಡದಿದ್ದರೆ ತಾವು ಅದರ ಮೇಲೆ ಕಾಮೆಂಟ್ ಮಾಡಬಹುದು. ಇಷ್ಟು ಹೇಳಿದ ಮೇಲೆ ನಾನು ಏನು ತಿಳಿದುಕೊಂಡೆ ಅಂದರೆ ಪಾಪ ವಿರೋಧಪಕ್ಷದ ನಾಯಕರು ಮತ್ತು ಉಪ ನಾಯಕರು ಒಪ್ಪಿಕೊಂಡರು. ಯಡಿಯೂರಪ್ಪನವರೂ ಒಪ್ಪಿಕೊಂಡರು. ಆದರೆ ತಾವು ಏನು ಮಾಡಿದಿರಿ. ತಾವು ಅದನ್ನು ಮರೆಯಬಾರದು. ತಾವು ಆ ಜಿಲ್ಲೆಯಿಂದ ಬಂದವರು. ಆ ಜಿಲ್ಲೆಯಿಂದ ಬಂದವರೂ ಇಷ್ಟೆಲ್ಲಾ ಸರ್ಕಾರ ಒಪ್ಪಿಕೊಂಡ ಮೇಲೂ ಕೂಡಾ ತಾವು ಎತ್ತಿದರೆ, ಜನಗಳಿಗೆ ಸಂಶಯ ಬರುತ್ತದೆ.

ಶ್ರೀ ಆರ್.ವಿ. ದೇಶಪಾಂಡೆ : ಅವರು ಅರೆಸ್ಟ್ ಏತಕ್ಕೆ ಮಾಡಲಿಲ್ಲ ಎಂದು ಕೇಳಿದರು ಅಷ್ಟೇ. ಬೇರೇನೂ ಕೇಳಲಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ಇಷ್ಟು ಒಪ್ಪಿದರೂ ಕೂಡ ತಾವು ಮಾತನಾಡಿದರೆ ಚಿತಾವಣೆ ಮಾಡಿದರು ಎಂದು ಏನು ಆಪಾದನೆಗಳು ಇಲ್ಲಿದೆ ಅದಕ್ಕೆ ಪುಷ್ಟಿ ಬರುತ್ತದೆ ಎಂದು ಅಷ್ಟೇ ನಾನು ಹೇಳಿದೆ. I have never alleged.

ಈಗ ಸನ್ಮಾನ್ಯ ಏಕಾಂತಯ್ಯನವರು ಹಿರಿಯ ಸದಸ್ಯರು. ಅಂತಹ ಅಲಿಗೇಷನ್ಸ್ ನಾನು ಮಾಡಿದ್ದರೆ ಸರಿ What he said is correct. I never said.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಇದುವರೆಗೂ ಹೇಳಿದ್ದು ಸತ್ಯ. ನಾನು ಒಪ್ಪುತ್ತೇನೆ. ಆದರೆ, ಬೈರೇಗೌಡರೂ ಸಹ ಇವರ ಬಗ್ಗೆ ಮಾತನಾಡುತ್ತಿದ್ದಾರಲ್ಲಾ ಇದು ನನಗೆ ಬಹಳ ಸಂತೋಷ ಆಗಿದೆ

ಎನ್ನತಕ್ಕಂಥ ಮಾತನ್ನು ಹೇಳಿದಿರಿ. ಅದು ಏನಾಗುತ್ತದೆ ಮಾನ್ಯ ರಂಗನಾಥ್ರವರು ಕೇಳಬೇಕು. You must see his background. He was in Marxist Party. He has always been a leftist man.

ಆಗ ಏನಾಯಿತು ಅವರಿಗೆ ಪ್ರಚೋದನೆ ಆಯಿತು. ಅರೇ ನನ್ನ ಬಗ್ಗೆ ಇವರು ಹೇಳುತ್ತಾರಲ್ಲಾ ಹಾಗಾದರೆ ನಾನು ಹರಿಜನರ ಪರವಾಗಿ ಮಾತನಾಡಬಾರದೇನು ಎಂದು ಆಯಿತು.

ಶ್ರೀ ಎಂ. ವೀರಪ್ಪ ಮೊಯಿಲಿ : ತಾವು ದಯಮಾಡಿ ಕೇಳಿ. ತಾವು ಸ್ವಲ್ಪ ಮರೆ ಆಗಿದ್ದೀರಿ. ಅವರು ಏನು ಹೇಳಿದ್ದಾರೆ. ಇದನ್ನು ಹೇಳಿ ಎದ್ದು ನಿಂತ ಮೇಲೆ ನಾನು ಹೇಳಿದೆ. ಕೊನೆಗೆ ಏನು ಗೆಸ್ಚರ್ ಮಾಡಬೇಕೋ ಏನು ಎಲ್ಲಾ ಕೇಳಬೇಕೋ ಅದಲ್ಲಾ ಹೇಳಿ ಆದ ಮೇಲೆ ಮತ್ತೆ ನಾನು ಎದ್ದು ಹೇಳಿದೆ ಬಹಳ ಸಂತೋಷ ಬೈರೇಗೌಡರು ಈ ಜನಾಂಗದ ಬಗ್ಗೆ ಒಂದು ಬಹಳ ಹೆಚ್ಚಿನ ಅನುಕಂಪ ತೋರಿಸುತ್ತಾರೆ ಅದಕ್ಕೆ ನಾನು ವಿಶೇಷವಾಗಿ ಅಭಿಮಾನ ಹೊಂದಿದ್ದೇನೆಂದು ಹೇಳಿದೆ. ಅದಕ್ಕೆ ಏನು ತಪ್ಪು? ತಪ್ಪೇನು ಇದೆ ಅದರಲ್ಲಿ?

ಶ್ರೀ ಆರ್. ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೇ, ಈಗ ಪ್ರಶ್ನೆ ಬಂದಿದ್ದು. ಮಾನ್ಯ ಮುಖ್ಯಮಂತ್ರಿಗಳು ಯಾವಾಗ ಎಲ್ಲಾ ಎಕ್ಸಪ್ಲೆನೇಶನ್ಕೊಟ್ಟರು, ನಾನು ವಿಚಾರಣೆ ಮಾಡುತ್ತೇನೆ....

Sri M. Veerappa Moily : We are never on prestige. But, you should also not stand on prestige.

ಶ್ರೀ ಆರ್.ಎಲ್. ಜಾಲಪ್ಪ : ಇಲ್ಲಿ ಬಹಳ ಮುಖ್ಯವಾಗಿ ಬಂದಿರುವ ಪ್ರಶ್ನೆ. ಮಾನ್ಯ ಮುಖ್ಯಮಂತ್ರಿಗಳು ಎಸ್.ಪಿ. ಯಿಂದ ಮಾಡಿಸಿದ್ದೇನೆ ಡಿ.ಐ.ಜಿ.ಯಿಂದ ಮಾಡಿಸಿದ್ದೇನೆ ಎನ್ನುವ ಮಾತನ್ನು ಹೇಳಿದರು. ಬೈರೇಗೌಡರು ಒಂದು ಪ್ರಶ್ನೆಯನ್ನು ಕೇಳಿದರು ಮೊದಲು ಕಂಪ್ಲೇಟ್ ಬಂದ ತಕ್ಷಣವೇ ರಿಜಿಸ್ಟರ್ ಮಾಡಿ ಎಫ್.ಐ.ಆರ್. ಕೊಟ್ಟು ಅವರನ್ನು ಅರೆಸ್ಟ್ ಏತಕ್ಕೆ ಮಾಡಲಿಲ್ಲ ಎಂದು ಕೇಳಿದರು

ಶ್ರೀ ಎಂ. ವೀರಪ್ಪ ಮೊಯಿಲಿ : ತಾವು ಇರಲಿಲ್ಲ.

ಶ್ರೀ ಆರ್.ಎಲ್. ಜಾಲಪ್ಪ : ನಾನು ಇದ್ದೆ. I was sitting.

ಶ್ರೀ ಎಂ. ವೀರಪ್ಪ ಮೊಯಿಲಿ : ನಾನು ಹೇಳಿದೆ ಕೇಸ್ ರೆಜಿಸ್ಟರ್ ಆಗಿದೆ. ಅದರ ಮೇಲೆ ತನಿಖೆ ಆಗುತ್ತಿದೆ.

ಶ್ರೀ ಆರ್.ಎಲ್. ಜಾಲಪ್ಪ : ನಮಗೂ ನಿಮಗೂ ಒಂದು ವ್ಯತ್ಯಾಸ ಅಷ್ಟೇ. ಇದರಿಂದಲೇ ನೀವು ಎಷ್ಟೇ ಸಾಚಾ ಮುಖ್ಯಮಂತ್ರಿಗಳು ಆದರೂ ಈ ಗಾಬರಿಯಿಂದಲೇ ನೀವು ಎಲ್ಲರನ್ನು ಮೈ ಮೇಲೆ ತಲೆ ಮೇಲೆ ಎಳೆದುಕೊಂಡಿದ್ದು. ನಾನು ಇಲ್ಲೇ ಇದ್ದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಜಾಲಪ್ಪನವರೇ ಮೈಮೇಲೆ ಏಕೆ? ತಾವು ಏನು ಎಂಬುದು ನನಗೆ ಗೊತ್ತಿದೆ. ನಿಮ್ಮ ಇತಿಹಾಸ ಗೊತ್ತಿದೆ.

ಶ್ರೀ ಆರ್.ಎಲ್. ಜಾಲಪ್ಪ : ನಾನು ಇಲ್ಲೇ ನಿಮ್ಮ ಎದುರೇ ಗುಂಡುಕಲ್ಲು ಇದ್ದ ಹಾಗೆ ಇದ್ದೇನೆ. ನಾನು ಇರಲಿಲ್ಲ ಎಂದು ಹೇಳುತ್ತಿದ್ದೀರಲ್ಲಾ. ಯಾವುದೇ ಒಂದು ಕೇಸ್ ರೆಜಿಸ್ಟರ್ ಆದಾಗ ಅವರನ್ನು ಅರೆಸ್ಟ್ ಮಾಡುತ್ತಾರೋ ಇಲ್ಲವೋ ಸ್ವಾಮಿ? ಆಮೇಲೆ ಇನ್ವೆಸ್ಟಿಗೇಟ್ ಮಾಡಿ ತಪ್ಪು ಆದರೆ ಶಿಕ್ಷೆ ಕೊಡುತ್ತಾರೆ. ಸುಳ್ಳು ಆದರೆ "ಬಿ" ಶೀಟ್ ಹಾಕುತ್ತಾರೆ. ಅವರನ್ನು ಅರೆಸ್ಟ್ ಏತಕ್ಕೆ ಮಾಡಲಿಲ್ಲ ಎಂದು

ಕೇಳಿದಾಗ ತಮಗೆ ಸಿಟ್ಟು ಬಂದು ಈ ತರಹ ಮಾತನಾಡಿದಿರಿ. ಅದೇ ಮುಖ್ಯ ಕಾರಣ. ತಾವೇ ಹೇಳಿ ಇಂತಹ ಒಂದು ಕಂಪ್ಲೇಂಟ್ ಲಾಡ್ಜ ಆದಾಗ ಅರೆಸ್ಟ್ ಮಾಡುತ್ತಾರೋ ಇಲ್ಲವೋ? ಸ್ವಾಮಿ ನನ್ನ ತಾಲ್ಲೂಕಿನಲ್ಲೇ ನಾನು 50 ಕೇಸ್ ಕೊಡುತ್ತೇನೆ. ಸುಳ್ಳು ಕೇಸ್ಗಳನ್ನು ಹಾಕಿ ಅರೆಸ್ಟ್ ಮಾಡಿ ಮ್ಯಾಜಿಸ್ಟ್ರೇಟ್ ಮುಂದೆ ಪ್ರೊಡ್ಯೂಸ್ ಮಾಡಿದ್ದಾರೆ. ಸೆಷನ್ಸ್ಕೋರ್ಟ್ಗೆ ಅವರನ್ನು ಕರೆದುಕೊಂಡು ಹೋಗಿಬಿಟ್ಟಿದ್ದಾರೆ. ಇಲ್ಲಿ ಇವರನ್ನು ಏತಕ್ಕೆ ಅರೆಸ್ಟ್ ಮಾಡಲಿಲ್ಲ? ಅಲ್ಲಿ ರಿಪೋರ್ಟ್ ಆಗಿರುವುದೆಲ್ಲಾ ಪ್ರೆಸ್ನಲ್ಲಿ ಬಂದಿರುವುದೆಲ್ಲಾ ನಿಜ ಎಂದು ನಾನೂ ಕೂಡ ಹೇಳುವುದಕ್ಕೆ ತಯಾರಾಗಿಲ್ಲ. ಇಂತಹ ಸುಳ್ಳು ಕೇಸ್ಗಳು ಬೇಕಾದಷ್ಟು ಸಿ.ಆರ್.ಪಿ.ಸಿ. ಆಕ್ಟಲ್ಲಿ ಹಾಕುತ್ತಾರೆ. ಒಬ್ಬರಿಗೊಬ್ಬರಿಗೆ ಆಗದೆ ಇರುವಾಗ ಕೇಸ್ಗಳನ್ನು ಹಾಕಿರುವುದು ಇದೆ. ಒಬ್ಬರು ಇನ್ನೊಬ್ಬರಿಗೆ ಹೇಳಿಕೊಟ್ಟು ಹಾಕಿರುವುದು ಇದೆ. ಇದು ಸರಿಯಲ್ಲ ಎಂದು ನಾನೇ ಮೊದಲು ಮಾತನಾಡಿದ್ದೇನೆ. ಇಲ್ಲಿ ಬಂದ ತಕ್ಷಣ ನಾವೆಲ್ಲಾ ಕುಳಿತುಕೊಂಡು ಮಾತನಾಡಿದ್ದೇವೆ. ತಾವು ಕಾನೂನು ಪ್ರಕಾರ ಅವರನ್ನು ಅರೆಸ್ಟ್ ಮಾಡಬೇಕಾಗಿತ್ತು.

ಶ್ರೀ ಎಂ. ವೀರಪ್ಪ ಮೊಯಿಲಿ : ಈಗ ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಜಾಲಪ್ಪನವರೂ ಕೂಡ ಹೋಮ್ ಮಿನಿಸ್ಟರ್ ಆಗಿದ್ದರು. ಬಾಕಿ ಯಾರಾದರೂ ಒಂದು ಈ ಹೇಳಿಕೆ ಕೊಟ್ಟಿದ್ದರೆ ನಾನು ಹೇಳಬೇಕಿತ್ತು. ನೀವು ಮಾತನಾಡುವಾಗ ಲೈಟ್ ಹೋಯಿತು. ಅದಕ್ಕೆ ಯಾರದ್ದು ಸತ್ಯ ಯಾರದ್ದು ಅಸತ್ಯ ಎಂದು ಗೊತ್ತಾಯಿತು. ಇದು ತಮಾಷೆಗೆ ಸತ್ಯಾಸತ್ಯಾತೆ ಬಗ್ಗೆ ನಾನು ಒಂದು ಮಾತೂ ಕೂಡ ಹೇಳಲಿಲ್ಲ.

ಶ್ರೀ ಆರ್.ಎಲ್. ಜಾಲಪ್ಪ : ತಾವು ಮಾತನಾಡುವಾಗ ಬಹಳ ಚೆನ್ನಾಗಿ ಮಾತನಾಡುತ್ತೀರಿ ಏಕೆಂದರೆ ತಾವು ಸಾಹಿತಿಗಳು. ತಾವು ತಮ್ಮ ರಿಪ್ಲೈನಲ್ಲಿ ನಮ್ಮನ್ನು ಇಂಪ್ಲಿಕೇಟ್ ಮಾಡಿದಿರಿ. ಜನತಾದಳದವರು ಎಂದು ಹೇಳಿದಿರಿ. ತಾವು ಚೆನ್ನಾಗಿ ಮಾತನಾಡುತ್ತೀರಿ. ಅದು ನಮಗೆ ಅರ್ಥವಾಗುತ್ತದೆ ಅಷ್ಟೇ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಜಾಲಪ್ಪನವರು ಒಂದು ತಿಳಿದುಕೊಳ್ಳಬೇಕು ನನ್ನ ಹೇಳಿಕೆಯಲ್ಲಿ ಒಂದು ಅಲಿಗೇಷನ್ ನಿಮ್ಮ ಪಾರ್ಟಿ ವಿರುದ್ಧ ಇದ್ದರೆ ನೀವು ಆಮೇಲೆ ಹೇಳಿ.

Sri R.L. Jalappa : You have doubted the views........

ಶ್ರೀ ಎಂ. ವೀರಪ್ಪ ಮೊಯಿಲಿ : ಒಂದು ಶಬ್ದ ಕೂಡ ಬರಲಿಲ್ಲ.

ಶ್ರೀ ಆರ್.ಎಲ್. ಜಾಲಪ್ಪ : ನೋಡಿ.

ಶ್ರೀ ಎಂ. ವೀರಪ್ಪ ಮೊಯಿಲಿ : ನಾನು ಓದಿದ್ದು ಪ್ರಜಾವಾಣಿಯಲ್ಲಿ ಬಂದಿದ್ದು. ಅದಕ್ಕೆ ಅವಕಾಶ ಕೊಡುವುದು ಬೇಡ. ಪಕ್ಷಾತೀತವಾಗಿ ಇದನ್ನು ತನಿಖೆ ಮಾಡೋಣ. ಮೊದಲು ಹೇಳಿಕೆ ಕೊಡುವಾಗಲೇ ನಾನು ಹೇಳಿದೆ. ಅಲ್ಲಿ ಪಕ್ಷದ ಪ್ರಶ್ನೆ ಇಲ್ಲ. ಯಾವುದೇ ಪಕ್ಷಕ್ಕೆ ಯಾರೇ ಸೇರಿರಲಿ ಅದನ್ನು ನಾವು ಅಡಗಿಸತಕ್ಕಂಥ ಪ್ರಶ್ನೆ ಅಲ್ಲ ಶಿಕ್ಷೆಗೆ ಒಳಗಾಗಿಸಬೇಕಾಗುತ್ತದೆ ನಾವು ಬಿಡುವುದಿಲ್ಲ ಎಂದು ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಇಲ್ಲಿ ಪಕ್ಷವನ್ನು ಬೆಳೆಸುವುದು ಬೇಡ. ನೀವು ಬೇಡ ನಾವು ಕೂಡ ಬೇಡ. ಯಾರೇ ವ್ಯಕ್ತಿಗಳು ಈ ಪಕ್ಷಕ್ಕೆ ಸೇರಿದ್ದಾರೆ ಆದ್ದರಿಂದ ಅದು ಸುಳ್ಳು ಇರಲಿ ಸತ್ಯ ಇರಲಿ ಶಿಕ್ಷೆ ಆಗಬೇಕೆಂದು ನೀವೂ ಹೇಳಬಾರದು ನಾವೂ ಹೇಳಬಾರದು. ಸನ್ಮಾನ್ಯ ಜಾಲಪ್ಪನವರಿಗೆ ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಈ ಕೇಸ್ ರಿಜಿಸ್ಟರ್ ಆಗಿದೆ. ರಿಜಿಸ್ಟರ್ ಆಗಲಿಲ್ಲ ಎಂದು ತಾವು ಹೇಳಿದಿರಿ. ತಾವೂ ಕೂಡ ಹೋಮ್ ಮಿನಿಸ್ಟರ್ ಆಗಿದ್ದೀರಿ. ಒಬ್ಬರು ಕಂಪ್ಲೇಟ್ ಕೊಟ್ಟರು ಎಂದು ಅದು ರಿಜಿಸ್ಟರ್ ಆದ ಕೂಡಲೇ ಯಾವುದೇ ಒಂದು ಪ್ರಾಸ್ತಾವಿಕ ತನಿಖೆ ವಿಚಾರಣೆ ಇಲ್ಲದೆ ಯಾರನ್ನೂ ಅರೆಸ್ಟ್ ಮಾಡುವುದಿಲ್ಲ. ನೀವು ಅರೆಸ್ಟ್ ಮಾಡಿದ್ದಿರೋ ಇಲ್ಲವೋ

ಗೊತ್ತಿಲ್ಲ ನನಗೆ. ಏಕೆಂದರೆ ನಾನು ಹೋಮ್ ಮಿನಿಸ್ಟರ್ ಆಗಿರುವವರೆಗೂ ಒಬ್ಬರು ಕಂಪ್ಲೇಟ್ ಕೊಟ್ಟರು ಅಂದ ತಕ್ಷಣವೇ ಯಾವುದೇ ಒಂದು ಪ್ರಾಸ್ತಾವಿಕ ತನಿಖೆ ಇಲ್ಲದೆ ಒಬ್ಬರೂ ಸಾಕ್ಷಿಗಳು ಹೇಳದೆ ಇರುವಾಗ ಅವರು ಅರೆಸ್ಟ್ ಮಾಡಲಿಲ್ಲ. ಒಂದು ವೇಳೆ ಸಿ.ಓ.ಡಿ. ಎನ್ಕ್ವೈರಿಗೆ ಹೋಗಲಿ ಅವರು ತನಿಖೆ ಮಾಡಲಿ. ನಿಷ್ಪಕ್ಷಪಾತವಾಗಿ ಏನಾದರೂ ಇದ್ದರೆ ಯಾರೂ ಅರೆಸ್ಟ್ ಮಾಡುವುದಕ್ಕಾಗಲಿ ಯಾವುದೇ ಶಿಕ್ಷೆ ವಿಧಿಸುವುದಕ್ಕಾಗಲಿ ನಾವು ಅಡ್ಡಿ ಬರುವುದಿಲ್ಲ. ತಾವು ಎಸ್.ಸಿ.ಎಸ್.ಟಿ. ಕಮಿಟಿಯನ್ನು ಕೂಡ ದಯಮಾಡಿ ಕಳುಹಿಸಿ. ಅವರೂ ತನಿಖೆ ಮಾಡಲಿ, ಸಿ.ಓ.ಡಿ. ತನಿಖೆ ಮಾಡಲಿ ಸತ್ಯಾಂಶ ಹೊರಗೆ ಬರಲಿ. ಯಾರನ್ನೇ ಅವರು ಗುರುತಿಸಿ ಯಾವುದೇ ಆಪಾದನೆ ಮಾಡಿದ್ದರೂ ಕೂಡ ಸರ್ಕಾರ ಅದಕ್ಕೆ ಬದ್ಧವಾಗುತ್ತದೆ.

ಶ್ರೀ ಆರ್.ಎಲ್. ಜಾಲಪ್ಪ : ಈಗ ತಾವು ಕಂಪ್ಲೇಂಟ್ ಕೊಟ್ಟ ಕ್ಷಣವೇ ಅರೆಸ್ಟ್ ಮಾಡುವುದಿಲ್ಲ ಎಂದು ಹೇಳಿದಿರಿ, ದಯವಿಟ್ಟು ಇದು ಒಂದು ಸರ್ಕ್ಯುಲರ್ ಕಳುಹಿಸಿಕೊಡಿ. ತಮ್ಮ ಪೋಲೀಸ್ ಸ್ಟೇಷನ್ಗೆ. What you said do you put it in black and white?

Sri M. Veerappa Moily : Don't interpret and try to mislead my statement.

ಈಗ ಹಾಗಾದರೆ ಒಬ್ಬರು ಕಂಪ್ಲೇಂಟ್ ತಂದು ಕೊಟ್ಟರೆ ತಕ್ಷಣ ಅರೆಸ್ಟ್ ಮಾಡಬೇಕು ಎಂದು ತಮ್ಮ ಆಜ್ಞೆ ಏನಾದರೂ ಇದೆಯೇ? ತಾವು ಏನಾದರೂ ಹೋಮ್ ಮಿನಿಸ್ಟರ್ ಆಗಿ ಕೊಟ್ಟಿದ್ದರೆ ಅದನ್ನು ನಾನು ವಿತ್ ಡ್ರಾ ಮಾಡುತ್ತೇನೆ.

Sri R.V. Deshapande : Under the PCR Act that is being done, and the Act is being mislead.

Sri M. Veerappa Moily : No, please check up...

Sri R.V. Deshapande : It is being done....

ಶ್ರೀ ಎಂ. ವೀರಪ್ಪ ಮೊಯಿಲಿ : ಒಬ್ಬರು ಕಂಪ್ಲೇಂಟ್ ಕೊಟ್ಟ ಕೂಡಲೇ ತಕ್ಷಣವೇ ಅರೆಸ್ಟ್ ಮಾಡಬೇಕು ಎಂದು ಹೇಳುವ ಆದೇಶ ಇಲ್ಲ. There is no such thing.

5.00 ಪಿ.ಎಂ

ಯಾವುದೇ ಕೇಸ್ ರಿಜಿಸ್ಟರ್ ಆದ ತಕ್ಷಣ ಅಪಾದಿತರನ್ನು ಅರೆಸ್ಟ್ ಮಾಡಿಸಬೇಕು ಎಂಬುದನ್ನು ಒಪ್ಪಲು ನಾನು ತಯಾರಿಲ್ಲ. ನಾನು ಗೃಹಮಂತ್ರಿಯಾಗಿರುವವರೆಗೆ ಅದು ಸಾಧ್ಯವಿಲ್ಲ ಏಕೆಂದರೆ ನೀವು ಹಿಂದೆ ಗೃಹ ಮಂತ್ರಿಯಾಗಿದ್ದಿರಿ, ಆಗ ನಡೆದ ಕೇಸ್ನಲ್ಲಿ ಏನೇನಾಯಿತು, ಅದರಿಂದ ನೀವು ಏನಲ್ಲಾ ಅನುಭವಿಸಿದಿರಿ ಅದನ್ನು ನಾನು ಅನುಭವಿಸುವುದಕ್ಕೆ ತಯಾರಿಲ್ಲ.

(ಗೊಂದಲ)

ಉಪಾಧ್ಯಕ್ಷರು : ಮಾಧುಸ್ವಾಮಿಯವರೇ, ಕುಳಿತುಕೊಳ್ಳಿ. ಮಾನ್ಯ ಮುಖ್ಯ ಮಂತ್ರಿಗಳು ಹೇಳಿಕೆ ಕೊಡುತ್ತಾರೆ, ದಯಮಾಡಿ ಕುಳಿತುಕೊಳ್ಳಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಜಾಲಪ್ಪನವರ ಮೇಲೆ ಅಪಾರವಾದ ಅಭಿಮಾನ ನಮಗಿದೆ. ಅವರ ಮೇಲೆ ನಾನು ಏನು ಹೇಳಿದೆ? ಗೃಹಮಂತ್ರಿಗಳಾಗಿ ಕೆಲಸ ಮಾಡುವಾಗ ನಾವು ಸ್ವಲ್ಪ ಜಾಗ್ರತೆಯಿಂದ ಕೆಲಸ ಮಾಡಬೇಕಾಗುತ್ತದೆ. ತಾವು ತಪ್ಪು ಮಾಡಿದಿರಿ ಎಂದು ಹೇಳಲಿಲ್ಲ. ದಯಮಾಡಿ ಆ ಭಾವನೆ ಇಟ್ಟುಕೊಳ್ಳಬೇಡಿ. I have not told you to hurt your feelings. If it has hurt you, I am sorry but

at the same time while we discharge as Ministers in the Cabinet including Chief Minister and Home Minister, we will have to be extra careful.

ಆದಕ್ಕೇ ಹೇಳಿದೆ, ಕೆಲವು ಸಲ ನಿಮ್ಮ ಮೇಲೆ ನಮ್ಮ ಮೇಲೆ ಅಪಾದನೆ ಬರುತ್ತದೆ, ಏನೂ ಮಾಡದೆಯೇ ನೋಡಿ ಈಗ ಹಸ್ತಕ್ಷೇಪ ಮಾಡುತ್ತಿದ್ದೇವೆ ಎಂದು ಬಂತು ಅಂತಹ ಪ್ರಸಂಗ ನಿಮ್ಮದ್ದೂ ಇರಬಹುದು, ನಮ್ಮದ್ದೂ ಇರಬಹುದು, ಅಂತಹ ಪ್ರಸಂಗ ಎಲ್ಲರಿಗೂ ಬರುತ್ತದೆ. ಆದ್ದರಿಂದ ಅಂತಹ ಒಂದು ನಡವಳಿಕೆಯನ್ನು ತಪ್ಪಿಸೋಣ ಎಂದು ಹೇಳಿದೆ, ನಿಮ್ಮ ಮೇಲೂ ಅಪಾದನೆ ಬಂದಿದೆ ಎಂದು ಹೇಳಿದೆ ಅಂದರೆ ನೀವು ಅಂತಹ ಕೆಲಸ ಮಾಡಿದ್ದೀರಿ ಎಂದು ಖಂಡಿತವಾಗಿಯೂ ಹೇಳಲಿಲ್ಲ, ಅಂತಹ ಅಪಾದನೆ ನಿಮ್ಮ ಮೇಲೆ ಬಂದಿದೆ, ನಮ್ಮ ಮೇಲೆ ಬರಬಹುದು, ನಿಮ್ಮ ಮೇಲೆ ಬಂದ ಅಪಾದನೆ ಸತ್ಯ ಎಂದು ನಾನು ಹೇಳುತ್ತಿಲ್ಲ. I know you are pained because some incidents happened that doesn't mean alleging against you.

ನಾನು ಅದನ್ನು ಹೇಳುತ್ತಿಲ್ಲ. ನಾನು ಹೇಳುತ್ತಿರುವುದು ಅಂತಹ ಅಪಾದನೆಗಳು ನಾವಿಂಥ ಸ್ಥಾನದಲ್ಲಿರುವಾಗ ಬರುತ್ತದೆ. ಆದ್ದರಿಂದ ಬಹಳ ಜಾಗರೂಕತೆಯಿಂದ ಕೆಲಸ ಮಾಡಬೇಕಾಗುತ್ತದೆ. ನಿಮಗೂ ಅನುಭವ ಇದೆ. ಕೆಲವು ಸಲ ಇಂತಹ ಅಪಾದನೆಗಳು ಬಂದಾಗ ಎಷ್ಟು ತೊಂದರೆ ಅನುಭವಿಸುತ್ತೇವೆ ಎಂದು ತಮ್ಮ ಅನುಭವಕ್ಕೆ ಬಂದಿದೆ ಎಂದು ಅಷ್ಟೇ ನಾನು ಹೇಳಿದುದ್ದು. ತಮಗೆ ನೋವು ಮಾಡಬೇಕು ಎಂದು ಹೇಳಲಿಲ್ಲ.

(ಗೊಂದಲ)

ಉಪಾಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ. ಈಗ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು ನಾನು ನಿಮಗೆ ವೈಯಕ್ತಿಕವಾಗಿ ಅಲೆಜ್ ಮಾಡಿಲ್ಲ, ಆ ರೀತಿ ಆಗಿದ್ದರೆ ಸಾರಿ ಎಂದೂ ಕೇಳಿದ್ದಾರೆ. ದಯಮಾಡಿ ಇದನ್ನು ಮುಕ್ತಾಯ ಮಾಡಿ. ಗಮನ ಸೆಳೆಯುವ ಸೂಚನೆ ಶ್ರೀಮತಿ ಮೋಟಮ್ಮನವರದ್ದು. ಹಾಗೆಯೇ ಈಗಾಗಲೇ ನಾನು ಹೇಳಿದ್ದೇನೆ ಮಾನ್ಯ ಬೈರೇಗೌಡರು ಉಪಯೋಗಿಸಿದಂತಹ ಪದವನ್ನು ಕಡತದಿಂದ ಎಕ್ಸ್‌ಪಂಜ್ ಮಾಡಿದ್ದೇನೆ. ಈಗ ಗಮನ ಸೆಳೆಯುವ ಸೂಚನೆ.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ

ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯದ ಬದಲು ಬೇರೆ ವಿಷಯ ತೆಗೆದುಕೊಂಡಿರುವುದು.

+ಶ್ರೀ ಹೆಚ್. ಏಕಾಂತಯ್ಯ : ಸ್ವಾಮಿ ನಾನು ಕ್ರಿಯಾಲೋಪ ಎತ್ತುತ್ತಿದ್ದೇನೆ. ಅಧ್ಯಕ್ಷರೇ, ಸಂವಿಧಾನದತ್ತವಾದ ಅಧಿಕಾರ ಉಪಯೋಗಿಸಿಕೊಂಡು ರಾಜ್ಯಪಾಲರು ಭಾಷಣ ಮಾಡಿದ್ದಾರೆ. ಆ ಭಾಷಣದ ಮೇಲೆ ಚರ್ಚೆಯನ್ನು ನಾವು ಆರಂಭ ಮಾಡಬೇಕಾಗಿದೆ. ತಮ್ಮ ಮತ್ತು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ ಇದು ಬಹಳ ಗಂಭೀರವಾದ ವಿಚಾರ, ಸಂಪ್ರದಾಯಬದ್ಧವಾಗಿ ನಡೆದುಕೊಳ್ಳಬೇಕಾಗುತ್ತದೆ. ಕಾನೂನು ಬದ್ಧವಾಗಿ ನಡೆದುಕೊಳ್ಳಬೇಕಾಗುತ್ತದೆ. ಈ ಒಂದು ವಂದನಾಪ್ರಸ್ತಾವಕ್ಕೆ ಭಾಷಣ ಮಾಡುವಂತಹ ಸಂದರ್ಭದಲ್ಲಿ ಮಧ್ಯೆ ಯಾವುದೇ ವಿಧವಾದ ಕಾರ್ಯಕಲಾಪವನ್ನು ತೆಗೆದುಕೊಳ್ಳದಿರುವುದು ಒಂದು ಸಂಪ್ರದಾಯವಾಗಿ ಬೆಳೆದುಬಂದಿದೆ. ಅಧ್ಯಕ್ಷರೇ, ಬೆಳಿಗ್ಗೆ ನಾವು ನೋಡಿದ್ದೇವೆ, ತಾವು ಬಿಸಿನೆಸ್ ಅಡ್ವೈಸರಿ ಕಮಿಟಿಯ ಶಿಫಾರಸ್ ಮೇಲೆ ಮಾಡಿರಬಹುದು ಆದರೂ ನಾನು ಹೇಳುತ್ತೇನೆ. ಬಿಸಿನೆಸ್ ಅಡ್ವೈಸರಿ ಕಮಿಟಿಯವರು